# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಜೂನ್ 28, 2022

ಸಂಪುಟ : 49 ಸಂಚಿಕೆ : 45 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಅನಗತ್ಯ ವಾಹನ ತಪಾಸಣೆ ನಡೆಸದಂತೆ ಸೂದ್ ಸೂಚನೆ

ಬೆಂಗಳೂರು, ಜೂ.27 – ಪೊಲೀಸರು ಅನಗತ್ಯವಾಗಿ ವಾಹನ ತಪಾಸಣೆ ಮಾಡದಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ಸೂಚನೆ ನೀಡಿದ್ದಾರೆ.

ಮದ್ಯಪಾನ ಮಾಡಿ ವಾಹನ ಚಲಾಯಿಸುವವರು ಮತ್ತು ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನಗಳನ್ನು ಮಾತ್ರ ತಪಾಸಣೆ ಮಾಡಬೇಕು. ಕೇವಲ ದಾಖಲೆಗಳನ್ನು ಪರಿಶೀಲಿಸಲು ವಾಹನಗಳನ್ನು ನಿಲ್ಲಿಸಬಾರದು ಎಂದವರು ತಿಳಿಸಿದ್ದಾರೆ. ರಸ್ತೆಯಲ್ಲಿ ಪೊಲೀಸರು ದಿಢೀರನೇ ವಾಹನ ನಿಲ್ಲಿಸುವುದರಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಪೊಲೀಸರ ತಪಾಸಣೆಗೆ ಬೆದರಿ ವಾಹನ ಸವಾರರು ತ ಪ್ಪಿ ಸಿ ಕೊ ಳ್ಳುವ (3ನೇ ಪುಟಕ್ಕೆ)

# ಪಠ್ಯ ಲೋಪ ತಿದ್ದುಪಡಿಗೆ ಆದೇಶ

## ಆಕ್ರೋಶಕ್ಕೆ ಮಣಿದು ತಿದ್ದೋಲೆ ರೂಪದಲ್ಲಿ ಕ್ರಮ ತೆಗೆದುಕೊಂಡ ಸರ್ಕಾರ

ಬೆಂಗಳೂರು, ಜೂ. 27 - ಮಠಾಧೀಶರು, ಸಾಹಿತಿಗಳ ಆಕ್ರೋಶಕ್ಕೆ ಮಣಿದ ರಾಜ್ಯ ಸರ್ಕಾರ ಪಠ್ಯ ಪುಸ್ತಕ ಲೋಪಗಳನ್ನು ಸರಿಪಡಿಸಿ, ಆದೇಶ ಹೊರಡಿಸಿದೆ.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಪಠ್ಯ ಪುಸ್ತಕ ಲೋಪಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ನೀಡಿದ ಎಚ್ಚರಿಕೆ ಬೆನ್ನಲ್ಲೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉನ್ನತ ಮಟ್ಟದ ಸಭೆ ನಡೆಸಿ, ಪರಿಷ್ಕರಣೆ ನಿರ್ಧಾರ ಕೈಗೊಂಡಿದ್ದಲ್ಲದೆ, ಸರ್ಕಾರಿ ಆದೇಶ ಹೊರಡಿಸಿದ್ದಾರೆ.

ಈಗಾಗಲೇ ಪಠ್ಯಪುಸ್ತಕಗಳು ಮಕ್ಕಳ ಕೈ ಸೇರಿರುವುದರಿಂದ ಪರಿಷ್ಕರಣೆಗೆ ಒಳಪಟ್ಟಿರುವ ತಿದ್ದುಪಡಿಗಳನ್ನು ತಿದ್ದೋಲೆ ರೂಪದಲ್ಲಿ ನೀಡಲು ತೀರ್ಮಾನಿಸಲಾಗಿದೆ.

ಸಾಮಾನ್ಯವಾಗಿ ಈ ಹಿಂದೆ ಪಠ್ಯಪುಸ್ತಕಗಳ ರಚನೆ ಪರಿಷ್ಕರಣೆಗೆ ಒಳಗಾದಾಗ ಅನುಸರಿಸಿದ ಮಾನದಂಡವನ್ನೇ ಈಗಲೂ ಅನುಸರಿಸಿ, ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ತಿದ್ದುಪಡಿಯ ಪ್ರತಿಗಳನ್ನು ನೀಡಲು ತೀರ್ಮಾನಿಸಲಾಗಿದೆ.

9ನೇ ತರಗತಿಯಲ್ಲಿ ಸಂವಿಧಾನ ಶಿಲ್ಪಿ ಪದ ಕೈಬಿಡಲಾಗಿತ್ತು, ಇದೀಗ ಸಂವಿಧಾನ ಶಿಲ್ಪಿ ಪದವನ್ನು ಸೇರಿಸುವಂತೆ ಆದೇಶ ಹೊರಡಿಸಲಾಗಿದೆ.

7ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಭಕ್ತಿಪಂಥ ಕೈಬಿಡಲಾಗಿತ್ತು, ಪುರಂದರದಾಸ, ಕನಕ ದಾಸರ ಪಾಠಕ್ಕೆ ಕತ್ತರಿ ಹಾಕಲಾಗಿತ್ತು, ಭಕ್ತಿ ಪಂಥ ಮತ್ತು ಸೂಫಿ ಪಂಥ ಪಾಠ ಸಂಪೂರ್ಣ ಸೇರ್ಪಡೆಗೊಂಡಿದೆ.

7ನೇ ತರಗತಿಯ ಪ್ರಥಮ ಭಾಷೆಯಲ್ಲಿ ಗೊಂದಲವಾಗಿ ಮೂಲ ಕೃತಿಕಾರರ ಹೆಸರನ್ನೇ ಕೈಬಿಡಲಾಗಿತ್ತು. ಇದೀಗ ಡಾ.ಆರ್.ಎನ್. ಜಯಗೋಪಾಲ ಹೆಸರು ಕೈಬಿಟ್ಟು, ಜಿ. ಉದಯಶಂಕರ್ ಅವರ ಹೆಸರನ್ನು ಸೇರಿಸಲಾಗಿದೆ.

6ನೇ ತರಗತಿಯ ಸಮಾಜ ವಿಜ್ಞಾನದಲ್ಲೂ, ಸಿದ್ಧಗಂಗೆ, ಆದಿಚುಂಚನಗಿರಿ ಮಠದ ಸೇವೆ ಕೈಬಿಡಲಾಗಿತ್ತು, ಇದೀಗ ಮತ್ತೆ ಸೇರ್ಪಡೆಗೊಂಡಿದೆ.

7ನೇ ತರಗತಿಯ ಸಮಾಜ ವಿಜ್ಞಾನ ಭಾಗ 1 ರಲ್ಲಿ ಮೈಸೂರು ಮತ್ತು ಇತರೆ ಸಂಸ್ಥಾನಗಳು ಎಂಬ ಪಾಠದಲ್ಲಿದ್ದ ಸುರಪುರ ನಾಯಕರ ಕುರಿತಾದ ವಿವರಗಳನ್ನು ಸೇರಿಸಲಾಗಿದೆ. ಅಲ್ಲದೆ, ಮೈಸೂರಿನ ಚಾಮುಂಡಿ ತಾಣ ಹಾಗೂ ಅಲ್ಲಿನ ಸಂಸ್ಥಾನದ ಒಡೆಯರುಗಳ ಮಾಹಿತಿಯನ್ನು ಸರಿಪಡಿಸಲಾಗಿದೆ.

ಇದೇ ತರಗತಿಯ ಸಮಾಜ ವಿಜ್ಞಾನ ಭಾಗ 2 ರಲ್ಲಿ ಕರ್ನಾಟಕ ರಾಜ್ಯ ಏಕೀಕರಣ ಹಾಗೂ ಗಡಿ ವಿವಾದಗಳು ಎಂಬ ಪಾಠದಲ್ಲಿ ರಾಷ್ಟ್ರ ಕವಿ ಕುವೆಂಪು ಅವರ ಹಾಗೂ ಹುಯಿಲಗೋಳ ನಾರಾಯಣರಾವ್ (2ನೇ ಪುಟಕ್ಕೆ)

## ಬಿಜೆಪಿಯ ಅರ್ಧಕ್ಕೂ ಹೆಚ್ಚು ಶಾಸಕರಿಗೆ ಟಿಕೆಟ್ ಇಲ್ಲ ?

**ಉತ್ತರ ಪ್ರದೇಶದ ಸೂತ್ರ ಅನುಸರಿಸಲು ಹೈಕಮಾಂಡ್ ಯೋಚನೆ**

ಬೆಂಗಳೂರು, ಜೂ. 27 - ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸೇರಿದಂತೆ, ಹಾಲಿ ವಿಧಾನ ಸಭೆಯ ಬಿಜೆಪಿಯ ಅರ್ಧಕ್ಕೂ ಹೆಚ್ಚು ಸದಸ್ಯರಿಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಕೈ ತಪ್ಪುವ ಸಾಧ್ಯತೆ ಇದೆ.

ಕರ್ನಾಟಕದಲ್ಲಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯಲು ಶತ ಪ್ರಯತ್ನ ಮಾಡುತ್ತಿರುವ ಬಿಜೆಪಿ ಉತ್ತರ ಪ್ರದೇಶ ವಿಧಾನಸಭಾ ಚುನಾ ವಣೆಯಲ್ಲಿ ಅನುಸರಿಸಿದ ಮಾನ ದಂಡಗಳನ್ನೇ ಅನುಷ್ಠಾನಗೊಳಿಸಲು ಮುಂದಾಗಿದೆ.

ಪಕ್ಷದ ಈ ನಿರ್ಧಾರದಿಂದ ಘಟಾನುಘಟಿಗಳಿಗೆ ಮುಂಬರುವ ಚುನಾವಣೆಯಲ್ಲಿ ಕಮಲದ ಚಿನ್ಹೆ ಯಡಿ ಸ್ಪರ್ಧಿಸಲು ಅವಕಾಶ ಇರುವು ದಿಲ್ಲ ಎಂಬ ಮಾತುಗಳು ಕೇಳಿ ಬರುತ್ತಿವೆ. ಖಾಸಗಿ ಚುನಾವಣಾ (2ನೇ ಪುಟಕ್ಕೆ)

## ಇಂಧನ ಕೊರತೆಯಿಂದ 'ಲಾಕ್‌ಡೌನ್'

ಕೊಲಂಬೊ, ಜೂ. 27 – ಇಂಧನ ಕೊರತೆ ತೀವ್ರವಾಗಿರುವ ಹಿನ್ನೆಲೆಯಲ್ಲಿ ಬರುವ ಜುಲೈ 10ರ ಮಧ್ಯರಾತ್ರಿವರೆಗೆ ಅಗತ್ಯ ಸೇವೆಗಳಿಗೆ ಮಾತ್ರ ಅವಕಾಶ ಇರಲಿದೆ ಎಂದು ಶ್ರೀಲಂಕ ಸರ್ಕಾರ ಘೋಷಿಸಿದೆ.

ಆರೋಗ್ಯ, ರಕ್ಷಣೆ, ವಿದ್ಯುತ್ ಹಾಗೂ ರಫ್ತು ವಲಯಗಳು ಮಾತ್ರ ಜುಲೈ 10ರವರೆಗೆ ಕಾರ್ಯ ನಿರ್ವಹಿಸಲಿವೆ ಎಂದು ಸಂಪುಟ ವಕ್ತಾರ ಬಂಡುಲ ಗುಣವರ್ಧನೆ ತಿಳಿಸಿದ್ದಾರೆ.

ಅಗತ್ಯ ಸೇವೆಗಳಿಗೆ ಮಾತ್ರ ಸಿಲೋನ್ ಪೆಟ್ರೋಲಿಯಂ ಕಾರ್ಪೊರೇಷನ್ ಡೀಸೆಲ್ ಹಾಗೂ ಪೆಟ್ರೋಲ್ ಪೂರೈಸಲಿದೆ. ಉಳಿದ ಎಲ್ಲ ವಲಯಗಳವರೂ ಮನೆಗಳಿಂದಲೇ ಕಾರ್ಯ ನಿರ್ವಹಿಸಬೇಕು ಎಂದು ಸೂಚನೆ ನೀಡಲಾಗಿದೆ.

## ರಾಷ್ಟ್ರೀಯ ಹೆದ್ದಾರಿ; ವಿಳಂಬ ಕಾಮಗಾರಿ

### ಸರ್ವೀಸ್ ರಸ್ತೆ ನಿರ್ಮಾಣ ತಡವಾಗಿರುವುದಕ್ಕೆ ಸಂಸದ ಸಿದ್ದೇಶ್ವರ ತರಾಟೆ

ದಾವಣಗೆರೆ, ಜೂ. 27 – ಹೆದ್ದಾರಿಗೆ ಹೊಂದಿಕೊಂಡಂತೆ ಸರ್ವೀಸ್ ರಸ್ತೆ ಕಾಮಗಾರಿ ವಿಳಂಬವಾಗುತ್ತಿದೆ. ಅಧಿಕಾರಿಗಳು ತ್ವರಿತ ಕಾಮಗಾರಿಗೆ ನಿಗಾ ವಹಿಸುತ್ತಿಲ್ಲ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತರಾಟೆಗೆ ತೆಗೆದುಕೊಂಡಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಪ್ರತಿದಿನ 42 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಮಾಡುತ್ತೇವೆ ಎಂದು ನಾಗರಿಕರ ಮುಂದೆ ಹೇಳಿಕೊಳ್ಳುತ್ತೇವೆ. ಆದರೆ, ಜಿಲ್ಲೆಯಲ್ಲಿ ಮಾತ್ರ ಅದೇ ವೇಗದ ಕಾಮಗಾರಿ ನಡೆಯುತ್ತಿಲ್ಲ ಎಂದವರು ಆಕ್ಷೇಪಿಸಿದರು.


ಅಧಿಕಾರಿಗಳು ಬೆಂಗಳೂರಲ್ಲಿ ಕೂತು ಎಲ್ಲದಕ್ಕೂ ಸರಿ ಅನ್ನುತ್ತೀರಾ, ಕಾಮಗಾರಿ ನಡೆಯುವ ಸ್ಥಳಕ್ಕೆ ಬಂದು ವೀಕ್ಷಣೆ ಮಾಡುವುದಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ಸರ್ವೀಸ್ ರಸ್ತೆಯ ಕಾಮಗಾರಿ ನಾಲ್ಕು ವರ್ಷಗಳಾದರೂ ಪೂರ್ಣಗೊಂಡಿಲ್ಲ. ಅಕ್ಟೋಬರ್ ಒಳಗೆ ಸರ್ವೀಸ್ ರಸ್ತೆಯ ಪೂರ್ಣ ಕಾಮಗಾರಿ ಮಾಡುವುದಾಗಿ ಕಳೆದ ಸ ಭೆ ಯ ಲ್ಲಿ (2ನೇ ಪುಟಕ್ಕೆ)

## ಕನಕದಾಸರ ಕಡೆಗಣನೆ : ಸಿಎಂ ಭೇಟಿ ಮಾಡಿ ಚರ್ಚಿಸಿದ ಕಾಗಿನೆಲೆ ಶ್ರೀಗಳು

ಬೆಂಗಳೂರು, ಜೂ. 27 - ದಾಸ ಶ್ರೇಷ್ಠ ಭಕ್ತ ಕನಕದಾಸರ ಜೀವನ ಚರಿತ್ರೆ ಮತ್ತು ವಿಚಾರಗಳನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಕಡೆಗಣಿಸಿರುವ ಬಗ್ಗೆ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಅವರು ಸೋಮವಾರ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ಚರ್ಚಿಸಿದರು.

ಪಠ್ಯಪುಸ್ತಕ ಪರಿಷ್ಕರಣೆ ನೆಪದಲ್ಲಿ ತತ್ಪೂರ್ವ ಒಂಭತ್ತನೆಯ ತರಗತಿಯ ಸಮಾಜ ವಿಜ್ಞಾನ ಪುಸ್ತಕದಲ್ಲಿ ಒಂದು ಪುಟದಲ್ಲಿದ್ದ ಕನಕದಾಸರ ಜೀವನ ವಿವರಗಳನ್ನೊಳಗೊಂಡ ಪಠ್ಯ ಭಾಗವನ್ನು ಕೇವಲ ಒಂದೇ ಒಂದು ಸಾಲಿಗೆ ತಂದು



ಕಡಿತಗೊಳಿಸುವ ಮೂಲಕ ಈ ನಾಡು ಕಂಡ ಅತ್ಯಂತ ಶ್ರೇಷ್ಠ ಸಂತ, ಸಾಹಿತಿ, ತತ್ವಜ್ಞಾನಿ, ಸಮಾಜ ಸುಧಾರಕ, ಅಷ್ಟೇ ಅಲ್ಲದೆ ಧಾರ್ಮಿಕ ಅಂಧ ಶ್ರದ್ಧೆ, ಮೌಢ್ಯ ಮತ್ತು ತಳ ಸ ಮು ದಾ ಯ ಗ ಳ (2ನೇ ಪುಟಕ್ಕೆ)


**ಸೇಲ್ಸ್‌ಮನ್ ಬೇಕಾಗಿದ್ದಾರೆ**

ನಮ್ಮ ಪೇಂಟ್ ಮತ್ತು ಹಾರ್ಡ್‌ವೇರ್ ಅಂಗಡಿಗೆ ಸೇಲ್ಸ್ ಮಾಡಲು ಸೇಲ್ಸ್‌ಮನ್ ಬೇಕಾಗಿದ್ದಾರೆ. ಅನುಭವಸ್ಥರಿಗೆ ಆದ್ಯತೆ ಕೊಡಲಾಗುವುದು.

ಸಂಪರ್ಕಿಸಿ :

**ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್**
ಮಂಡಿಪೇಟೆ, ದಾವಣಗೆರೆ.





# ಅಗ್ನಿಪಥ್ ವಿರೋಧಿಸಿ ಕಾಂಗ್ರೆಸ್‌ನಿಂದ ಪ್ರತಿಭಟನೆ

ಹರಪನಹಳ್ಳಿ, ಜೂ.27 - ಕೇಂದ್ರದ ಅಗ್ನಿಪಥ್ ಯೋಜನೆ ವಿರೋಧಿಸಿ ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್, ಎನ್‌ಎಸ್‌ಯುಐ ಹಾಗೂ ವಿವಿಧ ಬ್ಲಾಕ್ ಸಮಿತಿಗಳು ತಾಲ್ಲೂಕು ಕಚೇರಿ ಎದುರು ಸತ್ಯಾಗ್ರಹ ನಡೆಸಿ, ತಹಶೀಲ್ದಾರ್ ಡಾ.ಶಿವಕುಮಾರ್ ಬಿರಾದಾರ್ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಕಾಂಗ್ರೆಸ್ ಪಕ್ಷದ ಕಚೇರಿಯಿಂದ ಪ್ರತಿಭಟನಾ ಮೆರವಣಿಗೆ ಮೂಲಕ ತಾಲ್ಲೂಕು ಮಿನಿ ವಿಧಾನಸೌಧದವರೆಗೂ ತೆರಳಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಮಾತನಾಡಿ, ಕೇಂದ್ರ ಸರ್ಕಾರ ದೇಶದ ಯುವಕರ ಭವಿಷ್ಯವನ್ನು ಅಸ್ಪೃಶ್ಯತೆಗೆ ತಳ್ಳುವ, ಯಾವುದೇ ದೂರದೃಷ್ಟ ಇಲ್ಲದೆ ಜಾರಿಗೆ ತರಲು ಬಿಜೆಪಿ ಸರ್ಕಾರ ಪ್ರಯತ್ನಿಸುತ್ತಿರುವ ಅಗ್ನಿಪಥ್ ಯೋಜನೆಯನ್ನು ತಕ್ಷಣವೇ ಕೈಬೀಡಬೇಕು ಹಾಗೂ ಈ ವಿಚಾರದಲ್ಲಿ ರಾಷ್ಟ್ರಪತಿಗಳು ಮಧ್ಯ ಪ್ರವೇಶ ಮಾಡಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ತಹಶೀಲ್ದಾರ್ ಡಾ.ಶಿವಕುಮಾರ್ ಬಿರಾದಾರ್ ಮಾತನಾಡಿ, ತಮ್ಮ ಮನವಿಯನ್ನು ರಾಜ್ಯಪಾಲರಿಗೆ ತಲುಪಿಸುವುದಾಗಿ ಹೇಳಿದರು.




ಹರಪನಹಳ್ಳಿ

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬೇಲೂರು ಅಂಜಪ್ಪ, ಪ್ರೇಮಕುಮಾರ್, ಮುಖಂಡರಾದ ಹೆಚ್.ಬಿ.ಪರಶುರಾಮಪ್ಪ, ಶಶಿಧರ್ ಪೂಜಾರ್, ಹೆಚ್.ಕೆ. ಹಾಲೇಶ್, ಪಿ.ಟಿ. ಭರತ್, ಎಂ.ಟಿ. ಸುಭಾಷ್ ಚಂದ್ರ, ಎಂ. ಬಿ.ಯಶವಂತಗೌಡ, ಎಂ.ಪಿ.ವೀಣಾ, ಪ್ರಭಾಕರಗೌಡ, ಅಂಬಾಡಿ ನಾಗರಾಜ್, ಎಂ.ಅಜ್ಜಣ್ಣ, ಸಾಬಳ್ಳಿ ಜಂಬಣ್ಣ, ಮತ್ತೂರು ಬಸವರಾಜ್, ಮೈದೂರು ರಾಮಣ್ಣ, ಕಂಚಿಕೇರಿ ಜಯಲಕ್ಷ್ಮಿ, ಕವಿತಾ, ನೇತ್ರಾವತಿ, ದಾವಣಗೆರೆ ಬಿ.ವೀರಣ್ಣ, ವೇದುನಾಯ್ಕ, ಎನ್.ಮಜೀದ್, ನೀಲಗುಂದ ವಾಗೀಶ್, ಎ.ಮೂಸಸಾಬ್, ಪಿ.ಪರಶುರಾಮ್, ಎನ್.ಎಸ್.ಯು.ಐನ ಶ್ರೀಕಾಂತ್, ಅರುಣ್ ಪೂಜಾರ್, ಪ್ರವೀಣ್, ಮಬುಸಾಬ್, ನರೇಶ್, ಸೇರಿದಂತೆ ಎಲ್ಲಾ ಬ್ಲಾಕ್ ಕಾಂಗ್ರೆಸ್ ಮುಖಂಡರು, ವಿದ್ಯಾರ್ಥಿ, ಯುವ ಸಂಘಟನೆಗಳು ಭಾಗಿಯಾಗಿದ್ದರು.

# ಅರ್ಧಕ್ಕೂ ಹೆಚ್ಚು ಶಾಸಕರಿಗೆ ಟಿಕೆಟ್ ಇಲ್ಲ?

**(1ನೇ ಪುಟದಿಂದ)** ಸಮೀಕ್ಷೆ, ಕೇಂದ್ರ ಸರ್ಕಾರ ತನ್ನದೇ ಮೂಲ ಗಳಿಂದ ಪಡೆದಿರುವ ಮಾಹಿತಿ ಇದೆಲ್ಲವನ್ನು ಗಣನೆಗೆ ತೆಗೆದುಕೊಂಡು ಪಕ್ಷ ಇಂತಹ ಕಠಿಣ ತೀರ್ಮಾನಕ್ಕೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯ ವಿಧಾನಸಭೆ ಚುನಾವಣೆಗೆ 9 ತಿಂಗಳು ಬಾಕಿ ಇರುವ ಮುನ್ನವೇ ಚುನಾವಣಾ ಸಿದ್ಧತೆ ನಡೆಸಿದೆ. ಯಡಿಯೂರಪ್ಪ, ಸಚಿವರಾದ ಗೋವಿಂದ ಕಾರಜೋಳ, ಉಮೇಶ್ ಕತ್ತಿ ಸೇರಿದಂತೆ ಕೆಲವು ಸಚಿವರು ಮತ್ತು ಸದಸ್ಯರಿಗೆ ವಯೋಮಿತಿಯ ಕಾರಣಕ್ಕೆ ಟಿಕೆಟ್ ತಪ್ಪಲಿದೆ.

ಶಾಸಕರಾದವರು ಕ್ರಿಯಾಶೀಲರಾಗಿಲ್ಲದೆ, ಕ್ಷೇತ್ರದ ಜನತೆಯಿಂದ ತಿರಸ್ಕರಿಸಲ್ಪಟ್ಟವರಿಗೂ ಅವಕಾಶವಿಲ್ಲ.

ಸಂಘಟನೆಯ ಬಗ್ಗೆ ಕಾಳಜಿ ಇಲ್ಲದೆ ಸರ್ಕಾರ ಮತ್ತು ಪಕ್ಷದ ವಿರುದ್ಧ ಅಪಸ್ವರ ಎತ್ತಿದವರಿಗೂ ಅವಕಾಶ ಇರುವುದಿಲ್ಲ.

ವಿಧಾನಸಭೆಯ 224 ಕ್ಷೇತ್ರಗಳ ಪೈಕಿ ಶೇ. 50 ರಷ್ಟು ಹೊಸ ಮುಖಗಳಿಗೆ ಅವಕಾಶ, ಅದರಲ್ಲೂ ಸ್ಥಳೀಯವಾಗಿ ವಿವಿಧ ಕ್ಷೇತ್ರಗಳಲ್ಲಿ ಜನಪ್ರಿಯತೆ ಹೊಂದಿರುವವರನ್ನು ಗುರುತಿಸಿ, ಅಂತಹವರಿಗೆ ಟಿಕೆಟ್ ನೀಡಲು ಪಕ್ಷ ಮುಂದಾಗಿದೆ.

ಅದರಲ್ಲೂ ವೈದ್ಯಕೀಯ, ಇಂಜಿನಿಯರಿಂಗ್, ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರು, ನಿವೃತ್ತ ಅಧಿಕಾರಿಗಳು, ಶಿಕ್ಷಣ ತಜ್ಞರಿಗೂ ಟಿಕೆಟ್ ದೊರೆಯಲಿದೆ.

ಉತ್ತರ ಪ್ರದೇಶದಲ್ಲಿ ಸಚಿವರೂ ಸೇರಿದಂತೆ 100 ಕ್ಕೂ ಹೆಚ್ಚು ಹಾಲಿ ಸದಸ್ಯರುಗಳಿಗೆ ಟಿಕೆಟ್ ನಿರಾಕರಿಸಿ, ಹೊಸ ಮುಖಗಳಿಗೆ ಅವಕಾಶ ನೀಡಿದ್ದರಿಂದ ಯೋಗಿ ಆದಿತ್ಯನಾಥ್ ಸತತವಾಗಿ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಆ ರಾಜ್ಯದಲ್ಲಿ ದಾಖಲೆ ನಿರ್ಮಿಸಿದರು.

ಕರ್ನಾಟಕ ಬಿಜೆಪಿಯಲ್ಲಿ ಕೆಲವು ಗೊಂದಲಗಳಿವೆ. ಮತ್ತು ನಾಯಕತ್ವದ ಕೊರತೆಯು ಇದೆ. ಇದನ್ನು ಬಿಜೆಪಿ ವರಿಷ್ಠರು ಸಂಘ ಪರಿವಾರದ ಸಹಕಾರ ಮತ್ತು ಕೆಲವು ಬದಲಾವಣೆಯ ಮೂಲಕ ಪಕ್ಷವನ್ನು ಅಧಿಕಾರಕ್ಕೆ ತರಲು ಮುಂದಾಗಿದ್ದಾರೆ.

ಒಂದಡೆ ಪ್ರಧಾನಿ ಮೋದಿ ಅವರ ವರ್ಚಸ್ಸು ಬಳಸಿಕೊಳ್ಳುವುದರ ಜೊತೆಗೆ ರಾಜ್ಯದಲ್ಲೂ ಮಠಾಧೀಶರು ಮತ್ತು ಸಂಘ-ಸಂಸ್ಥೆಗಳ ಸಹಕಾರ ಪಡೆದು, ದಕ್ಷಿಣ ಭಾರತದಲ್ಲಿ ತಮ್ಮ ನೆಲೆಯನ್ನು ಉಳಿಸಿಕೊಳ್ಳಲು ಯೋಜನೆ ರೂಪಿಸಿದೆ.

ಖಾಸಗಿ ಸಮೀಕ್ಷೆಗಳು ನೀಡಿರುವ ವರದಿ ಮತ್ತು ಕೇಂದ್ರ ತರಿಸಿಕೊಂಡಿರುವ ಮಾಹಿತಿಯನ್ನು ಆಧರಿಸಿ, ಕರ್ನಾಟಕ ಬಿಜೆಪಿಯಲ್ಲಿ ಮಹತ್ತರ ಬದಲಾವಣೆಯೊಂದಿಗೆ ಚುನಾವಣೆ ಎದುರಿಸಲು ವರಿಷ್ಠರು ಮುಂದಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ಸೋನಿಯಾ ಗಾಂಧಿ ಆಪ್ತ ಕಾರ್ಯದರ್ಶಿ ವಿರುದ್ಧ ಅತ್ಯಾಚಾರದ ಪ್ರಕರಣ

ನವದೆಹಲಿ, ಜೂ. 27 – ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಆಪ್ತ ಕಾರ್ಯದರ್ಶಿ ಪಿ.ಪಿ. ಮಾಧವನ್ ವಿರುದ್ಧ ದೆಹಲಿ ಪೊಲೀಸರು ಅತ್ಯಾಚಾರದ ಪ್ರಕರಣ ದಾಖಲಿಸಿಕೊಂಡಿದ್ದಾರೆ.

26 ವರ್ಷದ ಮಹಿಳೆಯೊಬ್ಬರು ನೀಡಿದ ದೂರಿನ ಅನ್ವಯ ಈ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಉದ್ಯೋಗ ಕೊಡಿಸುವ ಹಾಗೂ ಮದುವೆ ಮಾಡಿಕೊಳ್ಳುವ ಭರವಸೆ ನೀಡಿ ಅತ್ಯಾಚಾರ ಎಸಗಲಾಗಿದೆ ಎಂದು ಮಹಿಳೆ ದೂರಿದ್ದಾರೆ.

ಈ ವಿಷಯವನ್ನು ಬಹಿರಂಗ ಪಡಿಸಿದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಲಾಗಿದೆ ಎಂದೂ ಮಹಿಳೆ ಹೇಳಿದ್ದಾರೆ.

ಉತ್ತಮ್ ನಗರ ಪೊಲೀಸ್ ಠಾಣೆಯಲ್ಲಿ ಜೂನ್ 25ರಂದು ದೂರು ದಾಖಲಿಸಲಾಗಿದೆ ಎಂದು ದ್ವಾರಕಾ ಡಿ.ಸಿ.ಪಿ. ಎಂ. ಹರ್ಷ ವರ್ಧನ್ ತಿಳಿಸಿದ್ದಾರೆ.

ಹಿರಿಯ ರಾಜಕೀಯ ನಾಯಕರೊಬ್ಬರ ಆಪ್ತ ಕಾರ್ಯದರ್ಶಿಯಾಗಿರುವ 71 ವರ್ಷದ ಹಿರಿಯ ವ್ಯಕ್ತಿ ವಿರುದ್ಧ ಆರೋಪ ಮಾಡಲಾಗಿದೆ. ಈ ಬಗ್ಗೆ ತನಿಖೆ ನಡೆಸುತ್ತಿರುವುದಾಗಿ ಹರ್ಷ ವರ್ಧನ್ ಹೇಳಿದ್ದಾರೆ.

ರಾಜಕೀಯ ನಾಯಕರ ಹೆಸರನ್ನು ಡಿ.ಸಿ.ಪಿ. ಬಹಿರಂಗ ಪಡಿಸಿಲ್ಲ. ಆದರೆ, ಮಾಧವನ್ ವಿರುದ್ಧ ಆರೋಪಿಸಲಾಗಿದೆ ಎಂದು ದೆಹಲಿ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಮಹಿಳೆ ದೆಹಲಿಯವರು. ಅವರ ಪತಿ 2020ರಲ್ಲಿ ತೀರಿಕೊಂಡಿದ್ದರು. ಅವರ ಪತಿ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದ್ದಾರೆ.

# ರಾಷ್ಟ್ರೀಯ ಹೆದ್ದಾರಿ; ವಿಳಂಬ ಕಾಮಗಾರಿ

**(1ನೇ ಪುಟದಿಂದ)** ತಿಳಿಸಲಾಗಿತ್ತು. ಈ ಗಡುವು ಸಾಧ್ಯವಾಗುತ್ತದೆಯೇ? ಎಂದವರು ಅಧಿಕಾರಿಗಳನ್ನು ಪ್ರಶ್ನಿಸಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಚಿತ್ರದುರ್ಗ ಯೋಜನಾ ಅನುಷ್ಠಾನ ಘಟಕದ ಯೋಜನಾ ನಿರ್ದೇಶಕ ಶ್ರೀನಿವಾಸಲು ನಾಯ್ಡು ಮಾತನಾಡಿ, ಕೆಲವೆಡೆ ಸರ್ವೀಸ್ ರಸ್ತೆ ಕಾಮಗಾರಿ ಮುಗಿಯುತ್ತಾ ಬಂದಿದೆ. ಒಂದು ದೇವಸ್ಥಾನ ತೆರವು ಮಾಡಬೇಕಿದೆ. ಸೂಕ್ಷ್ಮ ವಿಚಾರ ಆಗಿರುವುದರಿಂದ ಅದನ್ನು ಬಗೆಹರಿಸಿ ಎಲ್ಲಾ ಕೆಲಸ ಮಾಡುವುದಾಗಿ ಹೇಳಿದರು.

ಮುಂದುವರೆದು ಮಾತನಾಡಿದ ಸಂಸದರು, ನಗರದ ವಿದ್ಯಾನಗರ ಬಳಿ ಸರ್ವೀಸ್ ರಸ್ತೆಯಲ್ಲಿ ಹೈಟೆನ್ಷನ್ ವಿದ್ಯುತ್ ಲೈನ್‌ಗಳು ಇದ್ದು ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಅವುಗಳನ್ನು ಶಿಫ್ಟ್ ಮಾಡಲು ಅಗತ್ಯ ಕ್ರಮವಹಿಸಬೇಕೆಂದು ತಿಳಿಸಿದರು.

ಜಿಲ್ಲಾ ಪಂಚಾಯ್ತಿ ಸಮೀಪದ ಹದಡಿ ಬ್ರಿಡ್ಜ್ ಹತ್ತಿರ ಸರ್ಕಲ್ ನಿರ್ಮಾಣ ಮಾಡುವಂತೆ ಹೇಳಿದ್ದರೂ ಅಲ್ಲಿ ಇನ್ನೂ ಕೆಲಸ ಪ್ರಾರಂಭ ಮಾಡಿಲ್ಲ. ಅದು ಅಪಘಾತದ ವಲಯ. ಮುನ್ನೆಚ್ಚರಿಕೆ ದೃಷ್ಟಿಯಿಂದ ಅಲ್ಲೊಂದು ಸರ್ಕಲ್ ನಿರ್ಮಾಣ ಕೆಲಸ ಶೀಘ್ರ ಪ್ರಾರಂಭ ಮಾಡುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಉಪವಿಭಾಗಾಧಿಕಾರಿ ಎನ್. ದುರ್ಗಾಶ್ರೀ, ತಹಶೀಲ್ದಾರ್ ಬಸವನಗೌಡ ಕೋಟೂರು, ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಮತ್ತಿತರರು ಉಪಸ್ಥಿತರಿದ್ದರು.

# ನಗರಕ್ಕೆ ಇಂದು ಸಚಿವ ಭೈರತಿ ಬಸವರಾಜ

ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ್ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ.



ಇಂದು ಬೆಳಿಗ್ಗೆ 8.30ಕ್ಕೆ ಬೆಂಗಳೂರಿನಿಂದ ಹೊರಟು ಬೆಳಿಗ್ಗೆ 9.45ಕ್ಕೆ ಜಿ.ಎಂ.ಐ.ಟಿ ಹೆಲಿಪ್ಯಾಡ್‌ಗೆ ಆಗಮಿಸುವ ಸಚಿವರು, ಬೆಳಿಗ್ಗೆ 10 ಗಂಟೆಗೆ ಸ್ಮಾರ್ಟ್ ಸಿಟಿಯ ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬೆಳಿಗ್ಗೆ 11 ಗಂಟೆಗೆ ತ್ರಿಶೂಲ್ ಕಲಾಭವನ ದಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ನೂತನ ಕಟ್ಟಡದ ಶಂಕುಸ್ಥಾಪನಾ ಕಾರ್ಯ ಕ್ರಮದಲ್ಲಿ ಭಾಗವಹಿಸುವರು. ಬೆಳಿಗ್ಗೆ 11.45ಕ್ಕೆ ದೇವರಾಜ ಅರಸು ಬಡಾವಣೆಯಯಲ್ಲಿರುವ ಅಂಧ ಮಕ್ಕಳ ಶಾಲೆಯಲ್ಲಿ ಯಶವಂತ ರಾವ್ ಜಾಧವ್ ಅವರ ಹುಟ್ಟು ಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸುವರು.

# ದೇಶದ ಸರ್ವಾಂಗೀಣ ಅಭಿವೃದ್ಧಿ ಕಾಂಗ್ರೆಸ್‌ನಿಂದ ಸಾಧ್ಯ

ದಾವಣಗೆರೆ, ಜೂ. 27- ದೇಶದ ಸರ್ವಾಂಗೀಣ ಅಭಿವೃದ್ಧಿ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ. ತನ್ಮೂಲಕ ಆಯಾ ರಾಜ್ಯಗಳು ಕೂಡ ಅಭಿವೃದ್ಧಿ ಹೊಂದಲಿವೆ ಎಂದು ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿಯೂ ಆಗಿರುವ ಪಕ್ಷದ ಜಿಲ್ಲಾ ವೀಕ್ಷಕ ಅಸಗೋಡು ಜಯಸಿಂಹ ಹೇಳಿದರು.

ನಗರದ ಕಾಂಗ್ರೆಸ್ ಕಚೇರಿ - ಡಾ. ಶಾಮನೂರು ಶಿವಶಂಕರಪ್ಪ ಭವನದಲ್ಲಿ ಇಂದು ನಡೆದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು. ಸರ್ವ ಸಮುದಾಯಗಳು ಮತ್ತು ಸರ್ವ ಧರ್ಮಗಳನ್ನು ಒಗ್ಗೂಡಿಸಿ ದೇಶವನ್ನು ಸರ್ವತೋಮುಖ ಅಭಿವೃದ್ಧಿಯತ್ತ ಕೊಂಡೊಯ್ಯುವಲ್ಲಿ ಕಾಂಗ್ರೆಸ್ ಪಕ್ಷ ಮಹತ್ತರ ಪಾತ್ರ ವಹಿಸಿದೆ ಎಂದರು.

ಇಂದಿನ ಯುವ ಜನತೆ ದೇಶದ ಭವಿಷ್ಯ ಎಂಬುದನ್ನು ಅರಿಯದ ಬಿಜೆಪಿ, ಯುವಜನರನ್ನು ದಿಕ್ಕುತಪ್ಪಿಸಲು ಹೊರಟಿದೆ ಎಂದು ಕಿಡಿಕಾರಿದರು.

ಎಲ್ಲಾ ಜಾತಿ-ಧರ್ಮಗಳಲ್ಲೂ ಜನರನ್ನು ವಿದ್ಯಾವಂತರನ್ನಾಗಿಸಿದ ಕೀರ್ತಿ ಕಾಂಗ್ರೆಸ್ ಪಕ್ಷಕ್ಕೆ ಸಲ್ಲಲಿದೆ. ಸುಳ್ಳು ಹೇಳಿ ಅಧಿಕಾರಕ್ಕೆ ಬಂದ ಬಿಜೆಪಿಗೆ ಜನ ಮುಂಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಮುಂದಿನ ದಿನಗಳಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ಕಾರ್ಯಕರ್ತರು, ಮುಖಂಡರು ಒಟ್ಟಾಗಿ ಕೆಲಸ ಮಾಡಬೇಕು. ಕಾಂಗ್ರೆಸ್ ನೀಡಿದ ಕೊಡುಗೆಗಳನ್ನು ಜನರಿಗೆ ತಲುಪಿಸುವಂತಹ ಕೆಲಸವನ್ನು ಮಾಡಬೇಕೆಂದು ಮನವಿ ಮಾಡಿದರು.

ಕೆ.ಪಿ.ಸಿ.ಸಿ ವಕ್ತಾರ ಡಿ.ಬಸವರಾಜ್, ಸೈಯದ್ ಸೈಫುಲ್ಲಾ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಎಸ್. ಮಲ್ಲಿಕಾರ್ಜುನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಅಯೂಬ್, ಕೆ.ಜಿ.ಶಿವಕುಮಾರ್, ಸುಷ್ಮಾ ಪಾಟೀಲ್ ಮಾತನಾಡಿದರು.

ಸಭೆಯಲ್ಲಿ ಮಹಾನಗರ ಪಾಲಿಕೆ ಸದಸ್ಯರುಗಳಾದ ಸೈಯದ್ ಚಾರ್ಲಿ, ಮಂಜುನಾಥ್ ಇಟ್ಟಿಗುಡಿ, ಜಾಕೀರ್, ಶಫೀಖ್ ಪಂಡಿತ್, ಕಬೀರ್, ಎಸ್.ಎನ್. ಚಂದ್ರಪ್ಪ, ಮಂಜಮ್ಮ ಹನುಮಂತಪ್ಪ, ಪರಸಪ್ಪ, ಮಾಜಿ ಮೇಯರ್ ಹೆಚ್.ಬಿ.ಗೋಣೆಪ್ಪ, ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆ ಅಧ್ಯಕ್ಷ ರಾಘವೇಂದ್ರ ಗೌಡ, ಮೈನುದ್ದೀನ್, ರಾಕೇಶ್, ಅಲಿ ರೆಹಮತ್, ಹರೀಶ್ ಕೆ.ಎಲ್.ಬಸಾಪುರ, ಟಿ.ರಮೇಶ್, ಬಿ. ಎಂ.ಈಶ್ವರ್, ಕೊಡಪಾನ ದಾದಾಪೀರ್, ಇಬ್ರಾಹಿಂ ಖಲೀವುಲ್ಲಾ, ಲಾಲ್ ಆರೀಫ್,ಕಾಂಗ್ರೆಸ್ ಸೇವಾದಳದ ಅಬ್ದುಲ್ ಜಬ್ಬಾರ್, ಅಲೆಕ್ಸಾಂಡರ್, ಹರೀಶ್, ವೀರೇಶ್, ಶುಭಮಂಗಳ, ರಾಧಾಬಾಯಿ, ರುದ್ರಮ್ಮ, ಸುನೀತಾ ಭೀಮಣ್ಣ, ಗೀತಾ ಚಂದ್ರಶೇಖರ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾರ್ಯಕರ್ತರ ಸಭೆಯಲ್ಲಿ ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಅಸಗೋಡು ಜಯಸಿಂಹ

## ನಗರದಲ್ಲಿ ಇಂದು ಯೋಗಿ ನಾರೇಯಣ ಬಲಿಜ ಸಂಘದ ವಾರ್ಷಿಕ ಮಹಾಸಭೆ

ಜಿಲ್ಲಾ ಶ್ರೀ ಯೋಗಿ ನಾರೇಯಣ ಬಲಿಜ ಸಂಘದ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಟಿ.ಹೆಚ್. ಸುರೇಂದ್ರ ಇವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11 ಕ್ಕೆ ಬಲಿಜ ವಿದ್ಯಾರ್ಥಿ ನಿಲಯದಲ್ಲಿ ಕರೆಯಲಾಗಿದೆ ಎಂದು ಕಾರ್ಯದರ್ಶಿ ನರಸಿಂಹಮೂರ್ತಿ ತಿಳಿಸಿದ್ದಾರೆ.

# ಮಳೆಗಾಗಿ ಕತ್ತೆಗಳಿಗೆ ಮದುವೆ



ಹರಪನಹಳ್ಳಿ, ಜೂ. 27 - ಉತ್ತಮ ಮಳೆಯಾಗಲಿ, ಬೆಳೆ ಸಮೃದ್ಧಿಯಾಗಲಿ ಎಂದು ಹರಕೆ ಹೊತ್ತ ರೈತರು ಎರಡು ಕತ್ತೆಗಳನ್ನು ತಂದು ಸಂಪ್ರದಾಯದಂತೆ ಮದುವೆ ಮಾಡಿಸಿ ಪಟ್ಟಣದಲ್ಲಿ ಟ್ರ್ಯಾಕ್ಟರ್‌ನಲ್ಲಿ ಮೆರವಣಿಗೆ ಮಾಡಿದರು.

ಹರಪನಹಳ್ಳಿ

ಪಟ್ಟಣದ ಕೋಣಕೇರಿಯ ಗರಡಿಮನೆಯಿಂದ ಮದುವೆ ಸಂಪ್ರದಾಯವನ್ನು ಕತ್ತೆಗಳಿಗೆ ನೆರವೇರಿಸಿ ಹೆಣ್ಣು ಮತ್ತು ಗಂಡು ಕತ್ತೆಗಳನ್ನು ಟ್ರ್ಯಾಕ್ಟರ್‌ನಲ್ಲಿ ಡ್ರಮ್‌ಸೆಟ್, ವಾದ್ಯ ಮೇಳದೊಂದಿಗೆ ಐ.ಬಿ.ವೃತ್ತ, ಹೊಸಪೇಟೆ ರಸ್ತೆ, ಮಾರ್ಗವಾಗಿ ಕೋಟೆ ಆಂಜನೇಯ ದೇವಸ್ಥಾನದವರೆಗೆ ತೆರಳಿ ಪೂಜೆ ಸಲ್ಲಿಸಿ ಸಮಾಪ್ತಿಗೊಳಿಸಲಾಯಿತು.

ದಾರಿಯುದ್ದಕ್ಕೂ ಸಾರ್ವಜನಿಕರಿಗೆ ಅಕ್ಷತೆಯನ್ನು ಕೊಟ್ಟು ಮಳೆ, ಬೆಳೆ ಉತ್ತಮವಾಗಲಿ ಎಂದು ಕತ್ತೆಗಳಿಗೆ ಹಾರೈಸಲಾಯಿತು.

ದೈವಸ್ಥರಾದ ಹಾಲಪ್ಪ, ಪಕ್ಕೀರಪ್ಪ, ಮೇಘರಾಜ್, ಕೋಟೆಪ್ಪ, ಆಂಜಿನಪ್ಪ, ಗೋಣೆಪ್ಪ, ಬಸವರಾಜ್ ಸೇರಿದಂತೆ ಇತರರು ಇದ್ದರು.

# ಪಠ್ಯ ಲೋಪ ತಿದ್ದುಪಡಿಗೆ ಆದೇಶ

**(1ನೇ ಪುಟದಿಂದ)** ಅವರ ಭಾವಚಿತ್ರಗಳನ್ನು ಅಳವಡಿಸಲಾಗುವುದು.

ನಾಲ್ಕನೇ ತರಗತಿಯ ಪರಿಸರ ಅಧ್ಯಯನ ಪ್ರತಿಯೊಬ್ಬರು ವಿಶಿಷ್ಟ ಎಂಬ ಪಾಠದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ ಕುವೆಂಪು ಅವರಿಗೆ ಚಿಕ್ಕಂದಿನಿಂದಲೂ ಕಥೆ, ಕವನ, ಪುಸ್ತಕ ಓದುವ ಬರೆಯುವ ಅಭ್ಯಾಸವಿತ್ತು ಎಂಬ ವಾಕ್ಯದ ನಂತರ ಅನೇಕರ ಪ್ರೋತ್ಸಾಹದಿಂದ ಇವರು ಮುಂದೆ ಪ್ರಖ್ಯಾತ ಕವಿ ಎನಿಸಿಕೊಂಡರು ಎಂಬ ಸಾಲನ್ನು ಕೈಬಿಟ್ಟು ಆದೇಶ ಹೊರಡಿಸಲಾಗಿದೆ.

ಮಠಾಧೀಶರು, ಸಾಹಿತಿಗಳು ಮತ್ತು ಸಮಾಜದ ವಿವಿಧ ಸ್ಥಾನಗಳಿಂದ ಎಲ್ಲಿ ಅಪಸ್ವರಗಳು ಕೇಳಿ ಬಂದಿತ್ತೋ, ಅಂತಹ ಲೋಪಗಳನ್ನು ಪಠ್ಯದಲ್ಲಿ ಪರಿಷ್ಕರಿಸಿ, ಗೊಂದಲಕ್ಕೆ ಇತಿಶ್ರೀ ಹಾಡಲು ಸರ್ಕಾರ ಮುಂದಾಗಿದೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪಠ್ಯ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೆಲ ಮಾರ್ಪಾಡುಗಳನ್ನು ಮಾಡಲಾಗಿದೆ. ಕೆಲವು ಕಡೆ ಹಳೆಯದನ್ನೇ ಉಳಿಸಿಕೊಳ್ಳಲಾಗಿದೆ ಎಂದರು.

ಪಠ್ಯಪುಸ್ತಕ ಪರಿಷ್ಕರಣೆ ಸಂಬಂಧ ಮಾಜಿ ಪ್ರಧಾನಿ ದೇವೇಗೌಡರಿಗೆ ಎಲ್ಲ ಪ್ರತಿಗಳೊಂದಿಗೆ ಇಂದು ಉತ್ತರ ಕಳುಹಿಸುವುದಾಗಿಯೂ ತಿಳಿಸಿದರು.

# ಬೆಳಗಾವಿಯಲ್ಲಿ ಬಿ.ಎಸ್.ಚನ್ನಬಸಪ್ಪ ಅಂಡ್ ಸನ್ಸ್ ಆರಂಭ

## ಪ್ರಾಮಾಣಿಕ ಸೇವೆ, ಉತ್ಕೃಷ್ಟ ದರ್ಜೆಯ ಬಟ್ಟೆಗೆ ಮನೆ ಮಾತು ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ : ಬೊಮ್ಮಾಯಿ

ಬೆಳಗಾವಿ, ಜೂ. 27- ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಜವಳಿ ಉದ್ಯಮವು ಪ್ರಾಮಾಣಿಕ ಸೇವೆ, ಉತ್ಕೃಷ್ಟ ದರ್ಜೆಯ ಬಟ್ಟೆಗಳಿಂದ ಕರ್ನಾಟಕದಲ್ಲಿ ಮನೆ ಮಾತಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಟಿಳಕವಾಡಿ ಮಿಲೇನಿಯಂ ಗಾರ್ಡನ್ ಬಳಿ ನೂತನವಾಗಿ ಸ್ಥಾಪನೆಗೊಂಡಿರುವ ದಾವಣಗೆರೆಯ ಬಿ. ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಜವಳಿ ಮಳಿಗೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವ ಮೂಲಕವೇ ಜವಳಿ ಉದ್ಯಮದಲ್ಲಿ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಬ್ರ್ಯಾಂಡ್ ಆಗಿ ಹೊರಹೊಮ್ಮಿದೆ. ದಿ. ಚನ್ನಬಸಪ್ಪ ಅವರು ಕಷ್ಟಪಟ್ಟು ಜನರಿಗೆ ಇಷ್ಟವಾದ ಬಟ್ಟೆಗಳನ್ನು ಒದಗಿಸುತ್ತಿದ್ದರು. ಪ್ರಾಮಾಣಿಕತೆ, ಗುಣಮಟ್ಟದ ಸೇವೆಯಿಂದ ಜನರ ವಿಶ್ವಾಸ ಗಳಿಸಿದ್ದಾರೆ. ಸುಮಾರು 80 ವರ್ಷದ ಹಿಂದೆ ಸಣ್ಣದಾಗಿ ಆರಂಭವಾಗಿದ್ದ ಈ ಉದ್ಯಮ, ಇಂದು ನಾಡಿನಲ್ಲಿ ಮನೆ ಮಾತಾಗಿದ್ದು, ಉತ್ತರ ಕರ್ನಾಟಕದ ಪ್ರಮುಖ ಕೇಂದ್ರ ಬೆಳಗಾವಿಯಲ್ಲಿ ಮಳಿಗೆ ಆರಂಭವಾಗಿದ್ದು ಸೂಕ್ತವಾಗಿದೆ ಎಂದರು.

ಕೆ.ಎಲ್.ಇ. ಸಂಸ್ಥೆ ಕಾರ್ಯಾಧ್ಯಕ್ಷ ಡಾ. ಪ್ರಭಾಕರ್ ಕೋರೆ ಮಾತನಾಡಿ, ಗೋವಾ ಮತ್ತು ಮಹಾರಾಷ್ಟ್ರದಿಂದ ತರಕಾರಿ ಹಾಗೂ ಬಟ್ಟೆ ಖರೀದಿಗೆ ಜನರು ಬರುತ್ತಾರೆ. ಇಲ್ಲಿ ಮಳಿಗೆ ತೆರೆಯುವಂತೆ ತಾವು ನೀಡಿದ್ದ ಸಲಹೆ ಮೇರೆಗೆ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಮಳಿಗೆ ಆರಂಭಿಸಿ ಮಹತ್ವದ ಹೆಜ್ಜೆ ಇಟ್ಟಿರುವುದು ಸಂತಸದ ಸಂಗತಿ ಎಂದರು.




ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ನಿರ್ದೇಶಕ ಬಿ.ಸಿ. ಚಂದ್ರಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಅಜ್ಜ ಆ ಕಾಲದಲ್ಲಿ ಗಂಟು ಹೊತ್ತು ಊರೂರು ಸುತ್ತಿ ಬಟ್ಟೆ ಮಾರುತ್ತಿದ್ದರು. ಅಜ್ಜಿ ಶಾಂತಮ್ಮ ಅವರ ಆಸೆಯಂತೆ ದಾವಣಗೆರೆಯಲ್ಲಿ ಚಿಕ್ಕ ಅಂಗಡಿ ತೆರೆಯಲಾಯಿತು. ಹಗಲು - ರಾತ್ರಿ ಕಷ್ಟಪಟ್ಟು ದುಡಿದು ಉದ್ಯಮ ಬೆಳೆಸಿದರು. ಈಗ ನಾಲ್ಕನೇ ತಲೆಮಾರಿನ ಮಕ್ಕಳೊಂದಿಗೆ ಉದ್ಯಮವನ್ನು ಉನ್ನತ ಮಟ್ಟಕ್ಕೆ ಏರಿಸಿದ್ದೇವೆ. ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಕಂಪನಿಯ 10ನೇ ಮಳಿಗೆ ಇದಾಗಿದ್ದು, ದಾವಣಗೆರೆ ಹೊರತುಪಡಿಸಿ ಬೆಳಗಾವಿಯಲ್ಲಿ ಆರಂಭಿಸುತ್ತಿರುವ ಮೊದಲ ಮಳಿಗೆ ಇದಾಗಿದೆ ಎಂದು ಹೇಳಿದರು.

ಸಚಿವರಾದ ಭೈರತಿ ಬಸವರಾಜ್, ಉಮೇಶ್ ಕತ್ತಿ, ಸಂಸದರಾದ ಶ್ರೀಮತಿ ಮಂಗಲ ಅಂಗಡಿ, ವಿಆರ್‌ಎಲ್ ಸಮೂಹ ಸಂಸ್ಥೆಗಳ ಛೇರ್ಮನ್ ಡಾ. ವಿಜಯ ಸಂಕೇಶ್ವರ, ಶಾಸಕರಾದ ಮಹಾದೇವಪ್ಪ ಯಾದವಾಡ, ದುರ್ಯೋಧನ ಐಹೊಳೆ, ಜಿಲ್ಲಾಧಿಕಾರಿ ನಿತೇಶ ಪಾಟೀಲ, ನಿರ್ದೇಶಕರಾದ ಬಿ.ಸಿ. ಉಮಾಪತಿ, ಪಿ. ಯು. ಶೇಖರ್, ಬಿ.ಎಸ್. ಮೃನಾಲ್, ಬಿ.ಸಿ. ವೇದ, ಮಾರ್ಕೆಟಿಂಗ್ ಮ್ಯಾನೇಜರ್ ಉಮೇಶ ಕುಮಾರ್ ಮತ್ತು ಇತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಿ.ಸಿ. ಶಿವಕುಮಾರ್ ಸ್ವಾಗತಿಸಿದರು. ಪಿ.ಸಿ. ವಿವೇಕ್ ವಂದಿಸಿದರು.

**ಮೊದಲ ದಿನವೇ ಸ್ಪಂದನೆ :** ನೂತನ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಜವಳಿ ಮಳಿಗೆಯಲ್ಲಿ ಮೊದಲ ದಿನವೇ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೊದಲ ಮಹಡಿಯಲ್ಲಿ ಪುರುಷ ಮತ್ತು ಸ್ತ್ರೀಯರು ಧರಿಸುವ ದಿನನಿತ್ಯದ ಬಟ್ಟೆ, ವಿವಿಧ ಬಗೆಯ ಸೀರೆ, ಗಾಗ್ರಾಗಳು, 2ನೇ ಮಹಡಿಯಲ್ಲಿ ಲೇಡೀಸ್ ರೆಡಿಮೇಡ್, ಹೋಮ್ ಫರ್ನಿಶಿಂಗ್, 3ನೇ ಮಹಡಿಯಲ್ಲಿ ಮಕ್ಕಳ ಆಟಿಕೆ, ಮಕ್ಕಳ ಬಟ್ಟೆಗಳು, 4ನೇ ಮಹಡಿಯಲ್ಲಿ ಮೆನ್ಸ್ ರೆಡಿಮೇಡ್ ಬಟ್ಟೆಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. 5ನೇ ಮಹಡಿಯಲ್ಲಿ ರೆಸ್ಟೋರೆಂಟ್ ಸೌಲಭ್ಯವಿದೆ.

## ನೇತ್ರದಾನಿ ಎನ್.ಆರ್. ಬಕ್ಕಪ್ಪ ನಿಧನ



ದಾವಣಗೆರೆ ಎಲ್.ಐ.ಸಿ. ಕಾಲೋನಿ, ನೂತನ ಕಾಲೇಜು ರಸ್ತೆ, ತಿಮ್ಮಾರೆಡ್ಡಿ ಕಾಲೇಜು ಹಿಂಭಾಗದ ವಾಸಿ ಎನ್.ಆರ್. ರೇವಣಸಿದ್ದಪ್ಪ ಅಂಡ್ ಸನ್ಸ್ ಈರುಳ್ಳಿ ವ್ಯಾಪಾರಿಗಳಾದ

**ಎನ್.ಆರ್.ಬಕ್ಕಪ್ಪ**

ಅವರು, ದಿನಾಂಕ :27.06.2022ರ ಸೋಮವಾರ ರಾತ್ರಿ 11 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 67 ವರ್ಷ ವಯಸ್ಸಾಗಿತ್ತು. ಪತ್ನಿ, ಸಹೋದರರು,ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 28.06.2022ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಗ್ಲಾಸ್ ಹೌಸ್ ಬಳಿಯ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

**ಮೊ: 88923 31563, 70194 71103**

## ಶೇಷಪ್ಪ ಉಂದ್ಯಾಕೋಡ್ ನಿಧನ



ದಾವಣಗೆರೆ ನಿಟ್ಟುವಳ್ಳಿ ಹೊಸ ಬಡಾವಣೆ ವಾಸಿ ಸವಿತಾ ಸಮಾಜದ ಶೇಷಪ್ಪ ಉಂದ್ಯಾಕೋಡ್ (49) ಇವರು ದಿನಾಂಕ 27.6.2022ರ ಸೋಮವಾರ ಸಂಜೆ 5.10ಕ್ಕೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.6.2022ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಶಿವನಗೌಡ್ರು ನಿಧನ



ದಾವಣಗೆರೆ ಬನಶಂಕರಿ ಬಡಾವಣೆ ವಾಸಿ ಶಿವನಗೌಡ್ರು (54) ಅವರು ದಿನಾಂಕ 27.06.2022ರ ಸೋಮವಾರ ಮಧ್ಯಾಹ್ನ 12.45ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 28.06.2022ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಶಿರಮಗೊಂಡನಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ.

## ಕೆ.ಆರ್. ಗುರುಬಸಪ್ಪ ನಿಧನ



ದಾವಣಗೆರೆ ಡಿಸಿಎಂ ಟೌನ್ ಶಿಪ್ ವಾಸಿ, ಇಸಾಮುದ್ರ ಗ್ರಾಮದ ತಿಳ್ಳೇಕಟ್ಟೆ ದಿ. ರುದ್ರಪ್ಪನವರ ಮಗನಾದ ಕೆ.ಆರ್. ಗುರುಬಸಪ್ಪ (69) ಅವರು ದಿನಾಂಕ : 27.06.2022ರ ಸೋಮವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.06.2022ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

# ಕನಕದಾಸರ ಕಡೆಗಣನೆ : ಸಿಎಂ ಭೇಟಿ ಮಾಡಿ ಚರ್ಚಿಸಿದ ಕಾಗಿನೆಲೆ ಶ್ರೀಗಳು

**(1ನೇ ಪುಟದಿಂದ)** ಶೋಷಣೆ ವಿರುದ್ಧ ಸಾತ್ವಿಕ ಮತ್ತು ತಾತ್ವಿಕ ಹೋರಾಟ ನಡೆಸುವ ಮೂಲಕ ನೊಂದವರ ಧ್ವನಿಯಾದ ಕನಕದಾಸರ ಆದರ್ಶ ಮತ್ತು ದಾರ್ಶನಿಕ ಸತ್ಯಗಳನ್ನು ಮರೆಯಾಚುವ ದೊಡ್ಡ ಹುನ್ನಾರ ನಡೆಸಲಾಗಿದೆ.

ಇದು ಹಿಂದುಳಿದ ಸಮುದಾಯಗಳನ್ನು ಒಳಗೊಂಡಂತೆ ಈ ನೆಲದ ನಾಡು-ನುಡಿಗೆ ಮಾಡಿದ ದ್ರೋಹವಾಗಿದೆ ಮತ್ತು ಚಾರಿತ್ರ್ಯಿಕ ಹಾಗೂ ಸಾಂಸ್ಕೃತಿಕ ದ್ರೋಹವಾಗಿದೆ ಎಂದು ಮುಖ್ಯಮಂತ್ರಿಗಳಿಗೆ ಪತ್ರದ ಮೂಲಕ ಮನವರಿಕೆ ಮಾಡಿ ಕೊಟ್ಟಿರುವ ಶ್ರೀಗಳು, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸತ್ಯಗಳನ್ನು ತಿರುಚುವ ಕುತಂತ್ರವನ್ನು ಖಂಡಿಸಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಆಗಿರುವ ಲೋಪದೋಷಗಳನ್ನು ಕೂಡಲೇ ಸರಿಪಡಿಸುವಂತೆ ಶ್ರೀ ನಿರಂಜನಾನಂದಪುರಿ ಶ್ರೀಗಳು ಒತ್ತಾಯಿಸಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಆಗಿರುವ ಲೋಪ ದೋಷಗಳನ್ನು ಸರಿಪಡಿಸುವಂತೆ ಶ್ರೀ ನಿರಂಜನಾನಂದ ಪುರಿ ಶ್ರೀಗಳು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸುವುದಾಗಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ನಮಗೆ ಮಾತು ಕೊಟ್ಟಿದಾರೆಂದು ಶ್ರೀಗಳು 'ಜನತಾವಾಣಿ'ಗೆ ತಿಳಿಸಿದರು. ಈ ವೇಳೆ ಮುಖ್ಯಮಂತ್ರಿಗಳು ಕನಕದಾಸರ ಜೀವನ ಚರಿತ್ರೆ ಈ ಹಿಂದೆ ಇದ್ದ ಹಾಗೆಯೇ ಪ್ರಕಟಣೆ ಮಾಡುವಂತೆ ಸಂಬಂಧಪಟ್ಟ ಇಲಾಖೆಗೆ ಶ್ರೀಗಳ ಸಮ್ಮುಖದಲ್ಲಿಯೇ ಆದೇಶಿಸಿದರು.

# ಕಾಮಗಾರಿಗಳಲ್ಲಿ ಪರಿಸರದ ಕಾಳಜಿಯೂ ಇರಲಿ

## ಇಂಜಿನಿಯರ್‌ಗಳಿಗೆ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಐ) ರಾಜ್ಯಾಧ್ಯಕ್ಷ ಎಂ. ಲಕ್ಷ್ಮಣ ಕರೆ

ದಾವಣಗೆರೆ, ಜೂ. 27 - ನಗರ ಯೋಜನೆ, ಕಸ ವಿಲೇವಾರಿ, ನದಿಗಳನ್ನು ಕಾಪಾಡುವುದೂ ಸೇರಿದಂತೆ ಎಲ್ಲ ಪರಿಸರ ವಲಯಗಳನ್ನು ರಕ್ಷಿಸುವಲ್ಲಿ ಇಂಜಿನಿಯರ್‌ಗಳು ಸಕ್ರಿಯವಾಗಿ ಕೊಡುಗೆ ನೀಡಬೇಕಿದೆ ಎಂದು ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಐ) ರಾಜ್ಯ ಘಟಕದ ಅಧ್ಯಕ್ಷ ಎಂ. ಲಕ್ಷ್ಮಣ ಕರೆ ನೀಡಿದ್ದಾರೆ.

ಬಿಐಇಟಿ ಕಾಲೇಜಿನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಐ) ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಐ.ಎ.ಎಸ್. ಉತ್ತೀರ್ಣರಾಗುವವರಲ್ಲಿ ಬಹುತೇಕರು ಇಂಜಿನಿಯರ್‌ಗಳಾಗಿದ್ದಾರೆ. ರಾಜಕಾರಣಿಗಳು ಶೇ.99ರಷ್ಟು ವಿಷಯಗಳಲ್ಲಿ ಐ.ಎ.ಎಸ್. ಅಧಿಕಾರಿಗಳ ಮಾತುಗಳನ್ನೇ ಕೇಳುತ್ತಾರೆ. ಇಷ್ಟಾದರೂ, ಇಂಜಿನಿಯರ್‌ಗಳು ಪರಿಸರ ರಕ್ಷಣೆ ವಿಷಯದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸಲಹೆ ನೀಡಲು ಹಾಗೂ ಯೋಜನೆಗಳನ್ನು ಜಾರಿಗೆ ತರಲು ಮುಂದಾಗುತ್ತಿಲ್ಲ ಎಂದವರು ವಿಷಾದಿಸಿದರು.

ಸರ್ಕಾರದ ಬಜೆಟ್‌ನ ಶೇ.90ರಷ್ಟು ಹಣ ವಿನಿಯೋಗ ಇಂಜಿನಿಯರ್ಸ್‌ಗಳ ಮೂಲಕವೇ ನಡೆಯುತ್ತದೆ. ಇಂಜಿನಿಯರ್‌ಗಳು ಸರ್ಕಾರದ ಯೋಜನೆಗಳನ್ನು ಜಾರಿಗೆ ತರುವಲ್ಲಿನ ಗುಣಮಟ್ಟದ ಬಗ್ಗೆಯಷ್ಟೇ ಯೋಚಿಸದೇ, ಅದರಿಂದ ಪರಿಸರದ ಮೇಲೆ ಆಗುವ ಪರಿಣಾಮಗಳನ್ನೂ ಪರಿಗಣಿಸಬೇಕು ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಐ) ಗೌರವ ಕಾರ್ಯದರ್ಶಿ ಡಾ. ರಂಗಾ ರೆಡ್ಡಿ, ಗಂಗಾ ನದಿ ಶುದ್ಧೀಕರಣಕ್ಕೆ ಸಾವಿರಾರು ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಇಷ್ಟಾದ ನಂತರವೂ ಗಂಗಾ ನದಿ ಸಾಕಷ್ಟು ಕಡೆ ಕುಡಿಯಲು ಯೋಗ್ಯವಾಗಿಲ್ಲ. ಇಂತಹ ನದಿಗಳ ಸಂರಕ್ಷಣೆಯ ಬಗ್ಗೆ ಇಂಜಿನಿಯರ್‌ಗಳು ತುರ್ತು ಗಮನ ಹರಿಸಬೇಕಿದೆ ಎಂದರು.

ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಮಾತನಾಡಿ, ಮುಂದಿನ ವರ್ಷಗಳಲ್ಲಿ ಭೂಮಿಯ ಫಲವತ್ತತೆ ಸಂಪೂರ್ಣ ನಾಶವಾಗುವ ಅಪಾಯವಿದೆ. ಹೀಗಾಗಿ ಭೂ ಫಲವತ್ತತೆ ಉಳಿಸಲು ಅಗತ್ಯ ಕ್ರಮಗಳನ್ನು ಈಗಿನಿಂದಲೇ ತೆಗೆದುಕೊಳ್ಳಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಮಾತನಾಡಿ, ಕುಂದುವಾಡ ಕೆರೆ ಮರು ನಿರ್ಮಾಣದಲ್ಲಿ ಬಿ.ಐ.ಇ.ಟಿ.ಯ ಸಿವಿಲ್ ಇಂಜಿನಿಯರಿಂಗ್ ವಿಭಾಗ ಭಾಗಿಯಾಗಿತ್ತು. 2002ರಲ್ಲಿ ಕುಂದುವಾಡ ಕೆರೆ ವಿಸ್ತರಿಸಿದ ಕಾರಣ ನಗರದಲ್ಲಿ ಅಂತರ್ಜಲ ಸುಧಾರಿಸಿದೆ. ಈ ರೀತಿಯ ಸಮಾಜಮುಖಿ ಯೋಜನೆಗಳ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಿದೆ ಎಂದರು.

ವೇದಿಕೆಯ ಮೇಲೆ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಐ) ಜಿಲ್ಲಾ ಕೇಂದ್ರದ ಅಧ್ಯಕ್ಷ ಡಾ. ಜಿ.ಪಿ. ದೇಸಾಯಿ ಉಪಸ್ಥಿತರಿದ್ದರು.

ಡಾ. ವೀಣಾ ಆದಿ ಪ್ರಾರ್ಥಿಸಿದರು. ಡಾ. ಎಂ. ಎಸ್. ನಾಗರಾಜ್ ಸ್ವಾಗತಿಸಿದರು. ಡಾ. ಸಿ.ಪಿ. ಅನಿಲ ಕುಮಾರ್ ನಿರೂಪಿಸಿದರೆ, ಡಾ. ಎಸ್. ಸುರೇಶ್ ವಂದಿಸಿದರು.



### ನಿವೇಶನಗಳಿಂದಾಗಿ ಪರಿಸರ ನಾಶ

#### ಬಹುಮಹಡಿ ಮನೆಗಳೇ ದೇಶಕ್ಕೆ ಸೂಕ್ತ

ದೇಶದಲ್ಲಿ ವಸತಿಗಾಗಿ ಜಾಗದ ಲಭ್ಯತೆ ಸಾಕಷ್ಟು ಕಡಿಮೆಯಾಗಿದೆ. ಇಷ್ಟಾದರೂ ಜನರು ಪ್ರತ್ಯೇಕ ನಿವೇಶನವೇ ಬೇಕು ಎನ್ನುತ್ತಿದ್ದಾರೆ. ಇದರಿಂದಾಗಿ ಪರಿಸರ ನಾಶವಾಗುತ್ತಿದೆ ಎಂದು ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಅಭಿಪ್ರಾಯ ಪಟ್ಟಿದ್ದಾರೆ.

ಬಹುಮಹಡಿ ಮನೆಗಳ ನಿರ್ಮಾಣದಿಂದ ಕಡಿಮೆ ಜಾಗದಲ್ಲೇ ಹೆಚ್ಚು ಜನರಿಗೆ ಮನೆಗಳನ್ನು ಕಲ್ಪಿಸಬಹುದು ಎಂಬುದಕ್ಕೆ ನಗರದ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ನಿರ್ಮಿಸಿರುವ ಬಹುಮಹಡಿ ಕಟ್ಟಡ ಉತ್ತಮ ಉದಾಹರಣೆ ಎಂದವರು ಹೇಳಿದರು. ವಿದೇಶಗಳಲ್ಲಿ ಬಿಡಿ ನಿವೇಶನಗಳಿಗೆ ಫ್ಲಾಟ್‌ಗಿಂತ ಹತ್ತು - ಇಪ್ಪತ್ತು ಪಟ್ಟು ಹೆಚ್ಚು ತೆರಿಗೆ ವಿಧಿಸಲಾಗುತ್ತದೆ. ಭಾರತದಲ್ಲೂ ಬಿಡಿ ನಿವೇಶನ ಮಾಲೀಕರಾಗುವ ಹಂಬಲ ಬಿಟ್ಟು ಬಹುಮಹಡಿ ಕಟ್ಟಡಗಳಲ್ಲಿ ಮನೆಗಳನ್ನು ಹೊಂದಬೇಕಿದೆ. ಇದರಿಂದ ಕಡಿಮೆ ಜಾಗದಲ್ಲಿ ಹೆಚ್ಚು ಜನರಿಗೆ ಆಶ್ರಯ ದೊರೆತು, ಪರಿಸರ ರಕ್ಷಣೆಯಾಗುತ್ತದೆ ಎಂದರು.

### ಮರಗಳನ್ನು ಬೆಳೆಸಿದರೂ ಪರಿಸರ ಸುಧಾರಿಸದು

ಪರಿಸರ ದಿನಾಚರಣೆ ಎಂದರೆ ಸಸಿಗಳನ್ನು ನೆಡುವುದು ಎಂಬಂತಾಗಿದೆ. ಆದರೆ, ಮರಗಳನ್ನು ಸಮೃದ್ಧವಾಗಿ ಬೆಳೆಸಿದರೂ ಪರಿಸರ ಕಲುಷಿತವಾಗುವುದು ತಪ್ಪದು ಎಂಬುದಕ್ಕೆ ದೆಹಲಿ ಉದಾಹರಣೆಯಾಗಿದೆ ಎಂದು ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಐ) ಗೌರವ ಕಾರ್ಯದರ್ಶಿ ಡಾ. ರಂಗಾ ರೆಡ್ಡಿ ಹೇಳಿದ್ದಾರೆ. ದೆಹಲಿಯಲ್ಲಿ ಶೇ.19ರಷ್ಟಿದ್ದ ಮರಗಳ ಪ್ರದೇಶ ಶೇ.32ಕ್ಕೆ ಹೆಚ್ಚಾಗಿದೆ. ಆದರೂ, ದೆಹಲಿ ವಿಶ್ವದ ಅತ್ಯಂತ ಕಲುಷಿತ ನಗರಗಳಲ್ಲಿ ಒಂದಾಗಿದೆ. ಈ ಹಿನ್ನೆಲೆಯಲ್ಲಿ ಉತ್ತಮ ಪರಿಸರಕ್ಕಾಗಿ ಇಂಜಿನಿಯರ್‌ಗಳು ಸಮಗ್ರ ಯೋಜನೆ ರೂಪಿಸಿ, ಜಾರಿಗೆ ತರಬೇಕಿದೆ ಎಂದವರು ತಿಳಿಸಿದರು.

# ಜಗಳೂರು ಪಟ್ಟಣಕ್ಕೆ 500 ಮನೆ ಮಂಜೂರು

ಜಗಳೂರು, ಜೂ.27- ಪಟ್ಟಣದಲ್ಲಿ 500 ಮನೆ ಹಾಗೂ 95 ಎಕರೆ ಪ್ರದೇಶದಲ್ಲಿ ನಿವೇಶನ ಮಂಜೂರಾತಿಗೆ ಕ್ರಮಕೈಗೊಳ್ಳಲಾಗುವುದು ಎಂದು ಶಾಸಕ ಎಸ್.ವಿ. ರಾಮಚಂದ್ರ ಭರವಸೆ ನೀಡಿದರು.

ಪಟ್ಟಣ ಪಂಚಾಯಿತಿ ಆವರಣದಲ್ಲಿ ವಾಜಪೇಯಿ ಮತ್ತು ಅಂಬೇಡ್ಕರ್ ನಗರ ವಸತಿ ಯೋಜನೆಯಡಿ ಆಯ್ಕೆ ಯಾದ ಫಲಾನುಭವಿಗಳಿಗೆ ಕಾಮಗಾರಿ ಆದೇಶ ಪತ್ರ ವಿತರಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ವಸತಿ ಯೋಜನೆಯಡಿ 12 ಮನೆಗಳಿಗೆ ತಲಾ ರೂ.3.5 ಲಕ್ಷ ಹಾಗೂ ವಾಜಪೇಯಿ ಯೋಜನೆಯಡಿ 28 ಮನೆಗಳಿಗೆ ತಲಾ 1.70 ಲಕ್ಷ ಅನುದಾನ ಒದಗಿಸಲಾಗಿದ್ದು, ಆಯ್ಕೆಯಾಗಿರುವ ಅರ್ಹ ಫಲಾನುಭವಿಗಳು ಮನೆ ನಿರ್ಮಿಸಿಕೊಳ್ಳಬೇಕು. ಕೊಳಗೇರಿ ನಿವಾಸಿಗಳಿಗೆ 300 ಮನೆ ಕಟ್ಟಡದ ನಿರ್ಮಾಣ ಹಂತದಲ್ಲಿವೆ.

ಹಿಂದೆ ಪಟ್ಟಣದಲ್ಲಿ ಕೆರೆ ಒತ್ತುವರಿ ಹೆಸರಿನಡಿ ತೆರವುಗೊಳಿಸಿದ ಹಿನ್ನೆಲೆಯಲ್ಲಿ ನಿರಾಶ್ರಿತರಾದ 94 ಜನರಿಗೆ ಶೀಘ್ರದಲ್ಲಿ ನಿವೇಶನ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಅಧ್ಯಕ್ಷ ಎಸ್.ಸಿದ್ದಪ್ಪ, ಉಪಾಧ್ಯಕ್ಷೆ ಮಂಜಮ್ಮ ಆರ್.ತಿಪ್ಪೇಸ್ವಾಮಿ, ಲೋಕಮ್ಮ, ಮಹಮ್ಮದ್ ಅಲಿ, ಶಕೀಲ್ ಅಹ ಮ್ಮದ್, ಲುಕ್ಮಾನ್ ಖಾನ್, ನಜರತ್ ಉನ್ನೀಸಾ, ಬಿ.ಟಿ.ರವಿ, ರಮೇಶ್, ವಿಶಾಲಾಕ್ಷಿ, ನಿರ್ಮಲ, ನವೀನ್, ಲಲಿತಾ, ದೇವರಾಜ್, ಪಾಪ ಲಿಂಗಪ್ಪ, ನಾಮನಿರ್ದೇಶಿತ ಸದಸ್ಯ ಬಿ.ಪಿ.ಸುಭಾನ್, ಗಿರೀಶ್, ಮುಖ್ಯಾಧಿಕಾರಿ ಲೋಕ್ಯಾ ನಾಯ್ಕ, ಆರೋಗ್ಯ ನಿರೀಕ್ಷಕ ಖಿಫಾಯತ್ ಇದ್ದರು.



### ಶಾಸಕ ಎಸ್.ವಿ.ರಾಮಚಂದ್ರ ಪ್ರತಿಕ್ರಿಯೆ

ಮಾಜಿ ಶಾಸಕ ಎಚ್.ಪಿ.ರಾಜೇಶ್ ಅವರ ಆರೋಪಗಳಿಗೆ ನಾನು ಉತ್ತರಿಸುವುದಿಲ್ಲ,ಕ್ಷೇತ್ರದ ಜನರಿಗೆ ನನ್ನ ಬಗ್ಗೆ ಮತ್ತು ನಾನು ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾಮಗಾರಿಗಳು, ಜನಪರ ಕೆಲಸಗಳು ತಿಳಿದಿವೆ. ಮುಂದಿನ ಚುನಾವಣೆಯಲ್ಲಿ ಅವರಿಗೆ ಜನರೇ ತಕ್ಕ ಉತ್ತರ ನೀಡಲಿದ್ದಾರೆ. ಜನರ ತೀರ್ಮಾನಕ್ಕೆ ನಾನು ಬದ್ದ ಎಂದು ಶಾಸಕ ಎಸ್.ವಿ.ರಾಮಚಂದ್ರ, ಮಾಜಿ ಶಾಸಕರ ಪರ್ಸೆಂಟೇಜ್ ಆರೋಪಕ್ಕೆ ತಿರುಗೇಟು ನೀಡಿದರು.



### ಮಣ್ಣೆತ್ತಿನ ಅಮವಾಸ್ಯೆ

ಇಂದು ಮಂಗಳವಾರ ಮಣ್ಣೆತ್ತಿನ ಅಮಾವಾಸ್ಯೆ. ಈ ಹಿನ್ನೆಲೆಯಲ್ಲಿ ದಾವಣಗೆರೆ ಹಳೆ ಭಾಗದಲ್ಲಿ ಮಣ್ಣಿನ ಬಸವಣ್ಣನ ಮೂರ್ತಿಗಳ ಮಾರಾಟ ನಡೆಯಿತು.

# ತಲಾಕ್ ಎ ಹಸನ್ : ಪತಿಗೆ ಹೈಕೋರ್ಟ್ ನೋಟಿಸ್

ನವದೆಹಲಿ, ಜೂ. 27 – ತನ್ನ ಪತಿ ಕಳಿಸಿರುವ 'ತಲಾಕ್ - ಎ – ಹಸನ್' ನೋಟಿಸ್ ಸಂವಿಧಾನ ಬಾಹಿರ ಹಾಗೂ ಅಸಿಂಧು ಎಂದು ಮುಸ್ಲಿಂ ಮಹಿಳೆಯೊಬ್ಬರು ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದು, ನ್ಯಾಯಾಲಯ ಪತಿಗೆ ನೋಟಿಸ್ ಕಳಿಸಿದೆ.

ಗಂಡ, ದೆಹಲಿ ಪೊಲೀಸ್ ಆಯುಕ್ತ ಹಾಗೂ ದಾಬ್ರಿ ಪೊಲೀಸ್ ಠಾಣಾಧಿಕಾರಿಗೆ ನ್ಯಾಯಮೂರ್ತಿ ದಿನೇಶ್ ಕುಮಾರ್ ಶರ್ಮಾ ಅವರು ನೋಟಿಸ್ ಕಳಿಸಿದ್ದಾರೆ. ಕೇಂದ್ರ ಸರ್ಕಾರ ತ್ರಿವಳಿ ತಲಾಕ್ ನಿಷೇಧಿಸಿದೆ. ತಲಾಕ್ ಎ ಹಸನ್ ಸಹ ತ್ರಿವಳಿ ತಲಾಕ್ ರೀತಿಯದ್ದೇ ಆಗಿದೆ ಎಂದು ಪತ್ನಿ ಹೈಕೋರ್ಟ್‌ಗೆ ದಾಖಲಿಸಿರುವ ಅರ್ಜಿಯಲ್ಲಿ ತಿಳಿಸಿದ್ದಾರೆ. ನ್ಯಾಯಾಲಯ ಮುಂದಿನ ವಿಚಾರಣೆಯನ್ನು ಆಗಸ್ಟ್ 18ಕ್ಕೆ ನಿಗದಿ ಪಡಿಸಿದೆ.

ಜೂನ್ 2ರಂದು ನನ್ನ ಗಂಡ ತಲಾಕ್ ಎ ಹಸನ್ ಕಳಿಸಿದ್ದು, ಇದು ನ್ಯಾಯಾಂಗ ಬಾಹಿರ ಏಕಪಕ್ಷೀಯ ತಲಾಕ್ ಆಗಿದೆ. ಇದು ಸಂವಿಧಾನ ಬಾಹಿರ ಹಾಗೂ ಅಸಂಗತ. ಇದು ಸಂವಿಧಾನದ 14, 15, 21 ಹಾಗೂ 25ಕ್ಕೆ ವಿರುದ್ಧವಾಗಿದೆ. ಇದು ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಒಡಂಬಡಿಕೆಗೂ ವಿರುದ್ಧವಾಗಿದೆ ಎಂದು ಅರ್ಜಿದಾರರು ಹೇಳಿದ್ದಾರೆ.

ತಲಾಕ್ ಎ ಹಸನ್ ಪದ್ಧತಿಯ ಅನ್ವಯ ಮುಸ್ಲಿಂ ವ್ಯಕ್ತಿಯು ತಿಂಗಳಿಗೆ ಒಂದು ಬಾರಿ ತಲಾಕ್ ಹೇಳುವ ಮೂಲಕ, ಮೂರು ತಿಂಗಳು ತಲಾಕ್ ಹೇಳಿದಾಗ ವಿಚ್ಛೇದನ ಎಂದು ಪರಿಗಣಿಸಲಾಗುತ್ತದೆ.

ತಲಾಕ್ ಎ ಹಸನ್ ಅನ್ನು ಒಪ್ಪಿಕೊಳ್ಳುವಂತೆ ಮಹಿಳೆ ಮೇಲೆ ಒತ್ತಡ ಹೇರದಂತೆ ಧಾರ್ಮಿಕ ಸಂಘಟನೆಗಳು, ಸಂಸ್ಥೆಗಳು ಹಾಗೂ ಅದರ ನಾಯಕರಿಗೂ ನೋಟಿಸ್ ಕಳಿಸುವಂತೆಯೂ ಮನವಿಯಲ್ಲಿ ಕೋರಲಾಗಿದೆ. ಧಾರ್ಮಿಕ ಸಂಘಟನೆಗಳು ಹಾಗೂ ಸಂಸ್ಥೆಗಳಿಂದ ತಲಾಕ್ ಎ ಹಸನ್‌ಗೆ ಒತ್ತಡ ಬರದಂತೆ ಪೊಲೀಸ್ ರಕ್ಷಣೆ ನೀಡಬೇಕು ಎಂದೂ ಅವರು ಕೇಳಿದ್ದಾರೆ.

2020ರ ಸೆಪ್ಟೆಂಬರ್‌ನಲ್ಲಿ ಮದುವೆ ಮಾಡಿಕೊಂಡಿದ್ದೆ. ಅದ್ಧೂರಿ ಮದುವೆ ಮಾಡುವಂತೆ ತನ್ನ ವಿಧವೆ ತಾಯಿ ಮೇಲೆ ಒತ್ತಡ ಹೇರಲಾಗಿತ್ತು. ಈ ಬೇಡಿಕೆಗಳನ್ನು ಈಡೇರಿಸಿದರೂ ಮದುವೆ ನಂತರ ತಮಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಲಾಗಿತ್ತು ಎಂದು ಮಹಿಳೆ ದೂರಿದ್ದಾರೆ.

2021ರ ಡಿಸೆಂಬರ್‌ನಲ್ಲಿ ಈ ಬಗ್ಗೆ ದೆಹಲಿ ಮಹಿಳಾ ಆಯೋಗಕ್ಕೆ ದೂರು ನೀಡಿದರೂ ಕ್ರಮ ತೆಗೆದುಕೊಂಡಿರಲಿಲ್ಲ. ನಂತರದಲ್ಲಿ ಗಂಡ ತಲಾಕ್ - ಎ – ಹಸನ್ ನೋಟಿಸ್ ಕಳಿಸಿರುವುದಾಗಿ ಮಹಿಳೆ ದೂರಿದ್ದಾರೆ.

# ಪಠ್ಯ ಪರಿಷ್ಕರಣೆಗೆ ವಿಲಕ್ಷಣ ವ್ಯಕ್ತಿತ್ವದವರು ಬೇಡ

### ಶ್ರೀ ನಂಜಾವಧೂತ ಸ್ವಾಮೀಜಿ ಸಲಹೆ

ಬೆಂಗಳೂರು, ಜೂ. 27- ಶಾಲಾ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಗಳಿಗೆ ವಿಲಕ್ಷಣ ವ್ಯಕ್ತಿತ್ವದವರನ್ನು ನೇಮಿಸಬಾರದು. ಅಂತಹ ಸಮಿತಿಗಳಿಗೆ ನೇಮಕ ಮಾಡುವ ಮುನ್ನ ಸರ್ಕಾರ ಎಚ್ಚರಿಕೆ ವಹಿಸಬೇಕು ಎಂದು ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮೇಶ್ವರ ಮಠದ ಶ್ರೀ ನಂಜಾವಧೂತ ಸ್ವಾಮೀಜಿ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಡೆಯುತ್ತಿರುವ ಕೆಂಪೇಗೌಡ ಜಯಂತಿ ಸಮಾರಂಭದ ವೇದಿಕೆಯಲ್ಲೇ ಪಠ್ಯಪುಸ್ತಕ ಪರಿಷ್ಕರಣೆ ಕುರಿತು ಆಕ್ಷೇಪ ವ್ಯಕ್ತಪಡಿಸಿದ ಸ್ವಾಮೀಜಿ, ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಪರಿಶೀಲನಾ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದನ್ನು ವಿರೋಧಿಸಿದರು.

ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ ಸರ್ಕಾರ ರೂಪಿಸಿದ ಪಠ್ಯವನ್ನು ಓದಿ, ಕಲಿತು, ಪರೀಕ್ಷೆ ಬರೆಯಬೇಕು. ಅಂತಹ ಪಠ್ಯ ರೂಪಿಸುವವರು ಎಡ, ಬಲ ಅಥವಾ ಇನ್ನಿತರೆ ಸಿದ್ಧಾಂತಗಳ ಹಿಂಬಾಲಕರು ಆಗಿರಬಾರದು. ಸಮಚಿತ್ತದಿಂದ ಎಲ್ಲವನ್ನೂ ನೋಡುವ ಪ್ರಾಜ್ಞರಾಗಿರಬೇಕು. ಆಳವಾದ ಅಧ್ಯಯನಶೀಲತೆ ಹೊಂದಿದ ವ್ಯಕ್ತಿಗಳನ್ನು ಪಠ್ಯಕ್ರಮ ರೂಪಿಸಲು ನೇಮಿಸಬೇಕು ಎಂದು ಹೇಳಿದರು.

ಪವಿತ್ರವಾದ ನಾಡ ಬಾವುಟವನ್ನು ಯಾವುದೋ ಒಂದು ವಸ್ತುವಿಗೆ (ಚಡ್ಡಿ) ಹೋಲಿಸಿದ ವ್ಯಕ್ತಿಯನ್ನು ಪಠ್ಯಪುಸ್ತಕ ಪರಿಷ್ಕರಣೆಗೆ ನೇಮಿಸಿದ್ದು ಸರಿಯಲ್ಲ ಎಂದರು. ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್ ಮುಂತಾದ ಮಹನೀಯರಿಗೆ ಅವಮಾನ ಹೊಸದೇನೂ ಅಲ್ಲ. ಈಗ ಶಾಲಾ-ಪಠ್ಯಪುಸ್ತಕಗಳಲ್ಲಿ ಅವಮಾನ ಆಗಿರುವುದಕ್ಕೆ ಹೆಚ್ಚು ವಿರೋಧ ವ್ಯಕ್ತವಾಗಿದೆ. ಲೋಪವನ್ನು ಸರಿಪಡಿಸಿ ಮಹನೀಯರನ್ನು ಗೌರವಿಸುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಆಗ್ರಹಿಸಿದರು.

# ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ್ದೇ ಕಾಂಗ್ರೆಸ್

## ತುರ್ತು ಪರಿಸ್ಥಿತಿ 47ನೇ ಕರಾಳ ದಿನಾಚರಣೆ ಸಭೆಯಲ್ಲಿ ಎಸ್.ಎ ರವೀಂದ್ರನಾಥ್

ದಾವಣಗೆರೆ, ಜೂ.27- ತುರ್ತು ಪರಿಸ್ಥಿತಿಯಲ್ಲಿ ನಾನು ಕೂಡ ಬಂಧಿತನಾಗಿದ್ದೆ, ನನ್ನ ಜೊತೆ ಹಳೇ ಚಿತ್ರದುರ್ಗ ಜಿಲ್ಲೆಯ 150 ಕ್ಕೂ ಹೆಚ್ಚು ಮುಖಂಡರುಗಳು ಬಂಧಿತರಾಗಿ ದ್ದರು. ಈ ಸಂದರ್ಭದಲ್ಲಿ ಕಾಂಗ್ರೆಸ್‌ನವರು ಕೊಡಬಾರದ ಕಿರುಕುಳ, ಹಿಂಸೆ ನೀಡಿದರು, ಮನೆಯಲ್ಲಿರುವ ಬೆಳೆದಂತಹ ದವಸ ಧಾನ್ಯ ಗಳನ್ನು ಕೂಡ ಜಪ್ತಿ ಮಾಡಿ ದೇಶಭಕ್ತರನ್ನು ಹೆದರಿಸುವಂತಹ ಹೀನ ಕೃತ್ಯವನ್ನು ಆಗಿನ ಪ್ರಧಾನಿ ಇಂದಿರಾಗಾಂಧಿ ಎಸಗಿದ್ದರು ಎಂದು ಶಾಸಕ ಎಸ್.ಎ ರವೀಂದ್ರನಾಥ್ ಹೇಳಿದರು.



ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಛೇರಿಯಲ್ಲಿ ತುರ್ತು ಪರಿಸ್ಥಿತಿಯ 47ನೇ ವರ್ಷದ ಕರಾಳ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಭೆಯನ್ನು ಉದ್ದೇಶಿಸಿ ರವೀಂದ್ರನಾಥ್ ಮಾತನಾಡಿದರು.

ಇಂತಹ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ ಕಾಂಗ್ರೆಸ್ ಈಗ ಬರಿ ಇಡಿ ವಿಚಾರಣೆ ಮಾಡಿದರೆ ಮೋದಿ ಸರ್ಕಾರ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದೆ ಎಂದು ಆರೋಪಿಸುತ್ತಿದ್ದಾರೆ. ಈಗಿನ ಕಾಂಗ್ರೆಸ್‌ನವರು ತುರ್ತು ಪರಿಸ್ಥಿತಿಯನ್ನು ಏಕೆ ಖಂಡಿಸುತ್ತಿಲ್ಲ ಎಂದು ಪ್ರಶ್ನಿಸಿದರು.

ಲೋಕಸಭಾ ಸದಸ್ಯ ಜಿ.ಎಂ ಸಿದ್ದೇಶ್ವರ, ಮಾತನಾಡಿ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಡೆದ ಕ್ರೌರ್ಯದ ವಿಚಾರ ಈಗಿನ ಯುವ ಪೀಳಿಗೆಗೆ ತಿಳಿಸಿ ಅವರನ್ನು ಜಾಗೃತಿಗೊಳಿಸಬೇಕು ಹಾಗೂ ನಮ್ಮ ನೆಚ್ಚಿನ ಪ್ರಧಾನಿ ಕೈಗೊಂಡಿರು ವಂತಹ ದೇಶದ ಅಭಿವೃದ್ದಿ ಕಾರ್ಯಗಳನ್ನು ಪ್ರತಿಯೊಬ್ಬ ಯುವಕರಿಗೆ, ಗೃಹಿಣಿಯರಿಗೆ ತಿಳಿಸುವ ಕೆಲಸಗಳನ್ನು ಕಾರ್ಯಕರ್ತರು ಮಾಡಬೇಕೆಂದು ತಿಳಿಸಿದರು

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಬಿಜೆಪಿ ಜಿಲ್ಲಾ ಅಧ್ಯಕ್ಷ ವೀರೇಶ್ ಹನಗವಾಡಿ, ರಾಷ್ಟದ ಭದ್ರತೆ ಮತ್ತು ಯುವ ಜನಾಂಗದ ಹಿತಾಸಕ್ತಿಗಾಗಿ ಅಗ್ನಿಪಥ್ ವಿಚಾರವನ್ನು ಕಾಂಗ್ರೆಸ್‌ನವರು ರಾಜಕೀಕರಣಗೊಳಿಸಿ, ಸಮಾಜದಲ್ಲಿ ಅಶಾಂತಿಯನ್ನುಂಟು ಮಾಡುವುದರಲ್ಲಿ ತೊಡಗಿದ್ದಾರೆಂದು ಆರೋಪಿಸಿದರು.

ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀಮತಿ ಸುಧಾ ಜಯರುದ್ರೇಶ್, ಜಿಲ್ಲಾ ಪ್ರಭಾರಿ ಶಿವಲಿಂಗಪ್ಪ, ಹಿರಿಯ ಮುಖಂಡರಾದ ವೈ ಮಲ್ಲೇಶ್, ಯಶವಂತ ರಾವ್ ಜಾಧವ್, ಮಾಜಿ ಶಾಸಕ ಬಸವರಾಜನಾಯ್ಕ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್ ಜಗದೀಶ್, ನಾಗರಾಜ್ ಸೊಕ್ಕೆ, ಉಪಾಧ್ಯಕ್ಷರಾದ ಶಿವರಾಜ್ ಪಾಟೀಲ್, ಶ್ರೀನಿವಾಸ ದಾಸಕರಿಯಪ್ಪ, ಜಿಲ್ಲಾ ವಕ್ತಾರ ಡಿ.ಎಸ್ ಶಿವಶಂಕರ್ ಮತ್ತು ಇತರರು ಉಪಸ್ಥಿತರಿದ್ದರು.

# 'ಅಗ್ನಿಪಥ': ಹರಿಹರದಲ್ಲಿ ಕಾಂಗ್ರೆಸ್ ಪ್ರತಿಭಟನೆ

## ದೇಶದ ಯುವಕರ ಭವಿಷ್ಯ ಹಾಳು ಮಾಡುವುದಕ್ಕೆ ಬಿಜೆಪಿ ಮುಂದಾಗಿದೆ: ಶಾಸಕ ಎಸ್.ರಾಮಪ್ಪ

ಹರಿಹರ, ಜೂ27- ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಸರ್ಕಾರ ಅಗ್ನಿಪಥ ಯೋಜನೆಯನ್ನು ಜಾರಿಗೆ ತರುವ ಮೂಲಕ ದೇಶದ ಯುವಕರ ಭವಿಷ್ಯವನ್ನು ಹಾಳು ಮಾಡುವುದಕ್ಕೆ ಮುಂದಾಗಿದ್ದು, ಯೋಜನೆಯನ್ನು ಹಿಂಪಡೆಯದೇ ಹೋದರೆ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಪಕ್ಷವನ್ನು ಸೋಲಿಸುವ ಮೂಲಕ ಜನಪರವಾದ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವಂತೆ ಶಾಸಕ ಎಸ್ ರಾಮಪ್ಪ ಹೇಳಿದರು.



ನಗರ ಬ್ಲಾಕ್ ಕಾಂಗ್ರೆಸ್ ವತಿಯಿಂದ ನಡೆದ ಅಗ್ನಿಪಥ ಯೋಜನೆಯ ವಿರುದ್ಧ ಧರಣಿ ಸತ್ಯಾಗ್ರಹ, ಪ್ರತಿಭಟನೆ ವೇಳೆ ತಹಶೀಲ್ದಾರ್ ಶಶಿಧರ್ ಅವರಿಗೆ ಮನವಿಯನ್ನು ಅರ್ಪಿಸಿ, ಅವರು ಮಾತನಾಡಿದರು.

ಅಗ್ನಿಪಥ ಯೋಜನೆಯಿಂದ ಯುವಕರಿಗೆ ದೊಡ್ಡ ಪ್ರಮಾಣ ದಲ್ಲಿ ಅನ್ಯಾಯವಾ ಗುತ್ತದೆ. ದೇಶದ ಯುವಕರ ಭವಿಷ್ಯವನ್ನು ಅಸ್ಪಷ್ಟತೆಗೆ ತಳ್ಳುವ, ದೂರದೃಷ್ಟಿ ಇಲ್ಲದೇ, ಜಾರಿಗೆ ತರುವ ಕೆಲಸ ಮಾಡುವುದಕ್ಕೆ ಮುಂದಾಗಿದೆ. ಬಿಜೆಪಿ ಸರ್ಕಾರ ಯುವಕರಿಗೆ 2 ಕೋಟಿ ಉದ್ಯೋಗ ನೀಡುವುದಾಗಿ ಘೋಷಿಸಿತು. ಆದರೆ ಇವತ್ತಿನ ವರೆಗೂ ಒಬ್ಬ ಯುವಕನಿಗೂ ಉದ್ಯೋಗ ಒದಗಿಸುವ ಕಾರ್ಯವನ್ನು ಮಾಡಿಲ್ಲ ಎಂದು ಶಾಸಕರು ದೂರಿದರು.

ಕಾಂಗ್ರೆಸ್ ಪಕ್ಷದ ಮುಖಂಡ ಎನ್.ಹೆಚ್. ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಈ ಯೋಜನೆಯಿಂದ ಸಾಕಷ್ಟು ಯುವಕರು ಉದ್ಯೋಗ ಇಲ್ಲದೆ ಬೀದಿಗೆ ಬರುತ್ತಾರೆ ಹಾಗೂ ಅವರ ಕುಟುಂಬ ಸದಸ್ಯರು ಸಹ ಬೀದಿಗೆ ಬರುವ ಸಾಧ್ಯತೆ ಹೆಚ್ಚಾಗಿ ಇರುತ್ತದೆ. ಈ ಯೋಜನೆ ಅವೈಜ್ಞಾನಿಕವಾಗಿರುತ್ತದೆ ಎಂದರು.

ಕಾಂಗ್ರೆಸ್ ಪಕ್ಷದ ವೀಕ್ಷಕಿ ಕವಿತಾ ಮಾತನಾಡಿ, ಅಗ್ನಿಪಥ ಯೋಜನೆಯಡಿ 5 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದರೆ ಯುವಕರಿಗೆ ಗ್ರಾಚ್ಯುಟಿ ನೀಡಬೇಕಾಗುತ್ತದೆ ಎಂದು 4 ವರ್ಷಕ್ಕೆ ಸೀಮಿತಗೊಳಿಸಿ, ಯುವಕರಿಗೆ ಮೋಸ ಮಾಡುವುದಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ಮುಖಂಡ ದೀಟೂರು ಮಹೇಶ್ವರಪ್ಪ ಮಾತನಾಡಿ, ಅಗ್ನಿಪಥ ಯೋಜನೆ ಯುವಕರ ಮತ್ತು ಜನ ವಿರೋಧಿ ಯೋಜನೆಯಾಗಿದ್ದು, ಮಕ್ಕಳು ತಮ್ಮ 15-20 ವರ್ಷಗಳಷ್ಟು ಭವ್ಯವಾದ ದಿನಗಳನ್ನು ಹಾಳು ಮಾಡುವುದಕ್ಕೆ ಮುಂದಾಗಿದೆ ಎಂದು ಹೇಳಿದರು.

ಜಿಲ್ಲಾ ಯುವ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಮಾತನಾಡಿ, ಬಿಜೆಪಿ ಸರ್ಕಾರ ದೇಶದಾದ್ಯಂತ ಜಿ.ಎಸ್.ಟಿ, ನೋಟು ಅಮಾನ್ಯೀಕರಣ, ದಿನಸಿ ಪದಾರ್ಥಗಳನ್ನು ಹೆಚ್ಚಿಸಿ ಬಡವರು ನೆಮ್ಮದಿ ಜೀವನ ನಡೆಸದಂತಹ ಪರಿಸ್ಥಿತಿ ತಂದಿದೆ. ಇಂತಹ ಸರ್ಕಾರವನ್ನು ತೊಲಗಿ ಸಲು ಯುವಕರು ಮುಂದಾಗಬೇಕಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ಬಿ. ರೇವಣಸಿದ್ದಪ್ಪ, ನಗರಸಭೆ ಅಧ್ಯಕ್ಷೆ ಶಾಹೀನ್ ಬಾನು, ಜಿಪಂ ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ತಾಪಂ ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಸದಸ್ಯ ಜಿ.ಬಿ. ಹಾಲೇಶ್ ಗೌಡ್ರು, ಎಪಿಎಂಸಿ ಮಾಜಿ ಅಧ್ಯಕ್ಷ ಮಂಜುನಾಥ್ ಪಾಟೀಲ್, ನಗರಸಭೆ ಸದಸ್ಯ ಶಂಕರ್ ಖಟಾವ್ಕರ್, ಅಬ್ದುಲ್ ಅಲಿಂ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ ಹನುಮಂತಪ್ಪ, ಅಭಿದಾಲಿ, ದಾದಾಪೀರ್ ಭಾನುವಳ್ಳಿ, ಮಹಮ್ಮದ್ ಫೈರೋಜ್, ಜಿಗಳಿ ಆನಂದಪ್ಪ, ಮಲೇಬೆನ್ನೂರು ಗಂಗಾಧರ್, ಕೊಟ್ರೇಶ್ ನಾಯ್ಕ್, ಆಸೀಫ್ ಜುನೇದಿ, ಜಫ್ರುಲ್ಲಾ ಕನವಳ್ಳಿ, ಏಜಾಜ್ ಆಹ್ಮದ್, ಬಾಲರಾಜ್, ಹಬೀಬ್, ಕರಿಬಸಪ್ಪ ಬಾವಿಕಟ್ಟಿ ವಿದ್ಯಾ, ನೇತ್ರಾವತಿ, ಸವಿತಾ ಇತರರು ಹಾಜರಿದ್ದರು.

# ತಪಾಸಣೆ ನಡೆಸದಂತೆ ಸೂದ್ ಸೂಚನೆ

(1ನೇ ಪುಟದಿಂದ) ಯತ್ನದಲ್ಲಿ ಅಪಘಾವಾಗುತ್ತವೆ ಎಂಬ ದೂರುಗಳು ಕೇಳಿಬರುತ್ತಿದ್ದವು. ಈ ಕುರಿತು ಟ್ವೀಟ್ ಮಾಡಿರುವ ಪ್ರವೀಣ್ ಸೂದ್, ನಾನು ಮತ್ತೊಮ್ಮೆ ಪುನರುಚ್ಚರಿಸುತ್ತೇನೆ. ಕಣ್ಣಿಗೆ ಸ್ಪಷ್ಟವಾಗಿ ಗೋಚರಿಸುವಂತೆ ಸಂಚಾರ ನಿಯಮ ಉಲ್ಲಂಘನೆ ಮಾಡದ ಹೊರತು ಕೇವಲ ದಾಖಲೆಗಳನ್ನು ಪರಿಶೀಲಿಸುವುದಕ್ಕಾಗಿ ಯಾವುದೇ ವಾಹನ ನಿಲ್ಲಿಸಬಾರದು, ಮದ್ಯಪಾನ ಮಾಡಿ ವಾಹನ ಚಲಾಯಿಸುವವರು ಮತ್ತು ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನಗಳನ್ನು ಮಾತ್ರ ತಪಾಸಣೆ ಮಾಡಬೇಕು ಎಂದು ಹೇಳಿದ್ದಾರೆ.

ಇದನ್ನು ಅನುಷ್ಠಾನಗೊಳಿಸಲು ಬೆಂಗಳೂರು ಪೊಲೀಸ್ ಕಮೀಷನರ್ ಮತ್ತು ಸಂಚಾರಿ ವಿಭಾಗದ ಜಂಟಿ ಆಯುಕ್ತರಿಗೆ ಸೂಚಿಸಿದ್ದಾರೆ.


ಪವರ್ ಯೋಗ ಶಿಬಿರ

ಶಾರೀರಿಕ/ಮಾನಸಿಕ ಸದೃಢತೆಗಾಗಿ

ತೂಕ ಕಡಿಮೆ ಮಾಡಿಕೊಳ್ಳಿ

ದಿನಾಂಕ : 1.7.2022 ರಿಂದ 25.07.2022ರವರೆಗೆ

ಸಮಯ : ಸಂಜೆ 6.30 ರಿಂದ 8.00ರವರೆಗೆ

ವಿಶೇಷವಾಗಿ ಪವರ್ ಯೋಗ, ಬೆಲ್ಟ್ ಯೋಗ, ಸ್ಟಿಕ್ ಯೋಗ ಕ್ರಿಯೆಗಳ ಮೂಲಕ

5 ರಿಂದ 8 ಕೆ.ಜಿ. ತೂಕ ಕಡಿಮೆ ಮಾಡಿಕೊಳ್ಳಿ

ಮತ್ತು ವಿಶೇಷವಾದ ಶವಾಸನ, ತ್ರಾಟಕ ಧ್ಯಾನದ ಮೂಲಕ ಮಾನಸಿಕ ನೆಮ್ಮದಿ ಅನುಭವಿಸಿ.

ಸ್ಥಳ :

ದಿವ್ಯ ಯೋಗ ಮಂದಿರ


ನಂ. 3632, 8ನೇ ಮೇನ್, 7ನೇ ಕ್ರಾಸ್, ಪಿ.ಜಿ. ಮೆಡಿಕಲ್ ಹಾಸ್ಟೆಲ್ ಎದುರು, ಮೆಡಿಕಲ್ ಹಾಸ್ಟೆಲ್ ರೋಡ್, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ.

ಇಂದೇ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ

ಮೊ : 99726 00713, 94827 31081, 81924 70642



ಹುಟ್ಟುಹಬ್ಬದ ಶುಭಾಶಯಗಳು



ಶ್ರೀ ಬಸವರಾಜು ವಿ ಶಿವಗಂಗಾ ಶ್ರೀ ಶಿವಕುಮಾರ್ ಆರ್.

ಸ್ನೇಹ ಜೀವಿಗಳೂ, ಯುವ ಮುಖಂಡರೂ, ಆತ್ಮೀಯರೂ ಆದ

ಶ್ರೀ ಬಸವರಾಜು ವಿ. ಶಿವಗಂಗಾ

ಹಾಗೂ

ಶ್ರೀ ಶಿವಕುಮಾರ್ ಆರ್.

ಇವರುಗಳಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

ಭಗವಂತನು ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

* ಚಕ್ರಪಾಣಿ ಕೆ. ಬಿ.
* ರಾಘವೇಂದ್ರ ಜಿ.ಆರ್. ಗ್ರಾ.ಪಂ.ಸದಸ್ಯರು
* ಅಶೋಕ್ ತಲ್‌ವಾರ್
* ಚೇತನ್ ಮೈಸೂರು (ಚೌಧರಿ)
* ಶ್ರೀನಿವಾಸ ತಾಳ್ಯ, ಗ್ರಾ.ಪಂ.ಸದಸ್ಯರು
* ಅರುಣ್ ಶಿಂಧೆ (ಆರ್.ಟಿ.ಓ.)
* ರಘು (ಸೈನ್ಸ್ ಅಕಾಡೆಮಿ)
* ಮನ್ಸೂರ್
* ಮುರುಗೇಶ್, (ದುರ್ಗಾಂಬಿಕ ಕ್ಯಾಂಟೀನ್)
* ರುದ್ರೇಶ (ದುರ್ಗಾಂಬಿಕ ಕ್ಯಾಂಟೀನ್) DTS
* ಪ್ರಶಾಂತ್, ಈಶ್ವರಿ ಆಡಿಯೋ
* ಭರತ್, ಕೃಷಿಕರು
* ಅಂಜಿನಿ ನಿಟುವಳ್ಳಿ
* ರಾಕೇಶ್ (ಪಿಂಟೂ)
* ಸ್ಟಾರ್ ಪಚ್ಚಿ
* ಧರಣೇಂದ್ರ ಪ್ರಸಾದ್
* ಸಂತೋಷ್ ಪಾಟೀಲ್
* ವೀರೇಶ್ ಪಾಟೀಲ್
* ಲಂಕೇಶ್ * ಶಶಿ

ಹಾಗೂ ಗೆಳೆಯರ ಬಳಗ

## ಹಿರಿಯ ನಾಗರಿಕರ ಸಹಕಾರ ಸಂಘದ ಅಧ್ಯಕ್ಷರಾಗಿ ಪಟೇಲ್ ಬಸವರಾಜಪ್ಪ



**ಹೊನ್ನಾಳಿ**

ಹೊನ್ನಾಳಿ, ಜೂ.27- ತಾಲ್ಲೂಕಿನ ಹಿರಿಯ ನಾಗರಿಕರ ಸಹಕಾರ ಸಂಘದ ಅಧ್ಯಕ್ಷರಾಗಿ ಪಟೇಲ್ ಬಸವರಾಜಪ್ಪ ಗೌಡರು ಅವಿರೋಧವಾಗಿ ಶನಿವಾರ ಆಯ್ಕೆಯಾಗಿದ್ದಾರೆ. ಅಧ್ಯಕ್ಷರ ಆಯ್ಕೆಗೆ ಸೂಚಕರಾಗಿ ಬೆನಕನಹಳ್ಳಿ ವೀರಣ್ಣ, ನಿರ್ದೇಶಕ ಬಾಬುರವರು ಅನುಮೋದಕರಾಗಿದ್ದರು. ಚುನಾವಣಾಧಿಕಾರಿ ಮಂಜುನಾಥ್ ಅವರು ಈ ಆಯ್ಕೆ ಘೋಷಣೆ ಮಾಡಿದರು. ಸಂಘದ ನಿರ್ದೇಶಕರಾದ ಚಂದ್ರಕುಮಾರ್, ಶೇಖರಪ್ಪ, ದೊಡ್ಡ ಹಾಲೇಶಪ್ಪ, ಬಸಪ್ಪ, ಪಿ. ವೀರಪ್ಪ, ಹನುಮಂತಪ್ಪ, ಈಶ್ವರಪ್ಪ, ಬಾಬು, ಮಂಜಪ್ಪ, ಬಸವ ಭೋವಿ, ಗೌರಮ್ಮ, ಮೀನಾಕ್ಷಮ್ಮ, ಕಾರ್ಯದರ್ಶಿ ಸಿದ್ದಬಸಪ್ಪ ಇದ್ದರು.

## ವಿಶ್ವ ಸೈಕಲ್ ದಿನಾಚರಣೆಗಾಗಿ ಜಾಥಾ



**ಹರಿಹರ**

ಹರಿಹರ, ಜೂ. 27 - ನಗರದ ಹೆಚ್.ಕೆ. ಕೊಟ್ರಪ್ಪ ಸ್ನೇಹ ಬಳಗದ ವತಿಯಿಂದ ವಿಶ್ವ ಸೈಕಲ್ ದಿನಾಚರಣೆ ಅಂಗವಾಗಿ ನಡೆದ ಸೈಕಲ್ ಜಾಥಾ ಕಾರ್ಯಕ್ರಮಕ್ಕೆ ಅಂತರರಾಷ್ಟ್ರೀಯ ಕ್ರೀಡಾಪಟು ವೀರಭದ್ರಪ್ಪ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿಪಂ ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ಹೆಚ್.ಕೆ. ಕೊಟ್ರಪ್ಪ, ಕಸಾಪ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಮಾಜಿ ದೂಡಾ ಸದಸ್ಯ ಹೆಚ್.ನಿಜಗುಣ, ಮಾಜಿ ನಗರಸಭೆ ಅಧ್ಯಕ್ಷ ಬಿ. ರೇವಣ ಸಿದ್ದಪ್ಪ, ಬಿ. ಬಿ. ರೇವಣ್ಣನಾಯ್ಕ್, ವಿ.ಬಿ. ಕೊಟ್ರೇಶ್, ರಿಯಾಜ್ ಆಹ್ಮದ್, ಈಶಪ್ಪ ಬೂದಿಹಾಳ, ಎಕ್ಕೆಗೊಂದಿ ರುದ್ರೆಗೌಡ, ಎಂ.ಚಿದಾನಂದ ಕಂಚಿಕೇರಿ, ನಗರಸಭೆ ಮಾಜಿ ಸದಸ್ಯ ನಾಗರಾಜ್ ಮೆಹರ್ವಾಡೆ, ಜಿ.ಕೆ. ಪಂಚಾಕ್ಷರಿ, ಕೃಷ್ಣಮೂರ್ತಿ, ವೆಂಕಟೇಶ್, ಸಚ್ಚಿನ್ ಕೊಂಡಜ್ಜಿ ಇತರರು ಉಪಸ್ಥಿತರಿದ್ದರು.

## ಚರ್ಮರೋಗ ವಿಭಾಗದಲ್ಲಿ ಲಭ್ಯವಿರುವ ಸೇವಾ ಕೈಪಿಡಿ ಬಿಡುಗಡೆ



ದಾವಣಗೆರೆ, ಜೂ. 27 - ನಗರದ ಎಸ್.ಎಸ್. ಆಸ್ಪತ್ರೆಯ ಚರ್ಮ ರೋಗ ವಿಭಾಗದಲ್ಲಿ ಲಭ್ಯವಿರುವ ಸೇವಾ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅರುಣ್ ಕುಮಾರ್ ಅಜ್ಜಪ್ಪನವರು, ಚರ್ಮರೋಗ ವಿಭಾಗದಲ್ಲಿರುವ ಸೌಲಭ್ಯಗಳನ್ನು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಎಸ್. ಪ್ರಸಾದ್ ಕೈಪಿಡಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಚರ್ಮರೋಗ ವಿಭಾಗದ ಮುಖ್ಯಸ್ಥರಾದ ಡಾ. ವಿ. ಜಗನ್ನಾಥ ಕುಮಾರ್, ಡಾ. ಮಂಜುನಾಥ್ ಹುಲ್ಮನಿ ಮತ್ತು ಇತರರು ಭಾಗವಹಿಸಿದ್ದರು.

## ಗಾಂಜಾ : ಮೂವರು ಮಾಲು ಸಮೇತ ಸೆರೆ

**ಹರಿಹರ**

ಹರಿಹರ, ಜೂ. 27 - ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದಲ್ಲಿ ಮೂವರು ಆರೋಪಿಗಳನ್ನು ಮಾಲು ಸಮೇತ ಬಂಧಿಸಿರುವ ಘಟನೆ ನಗರದ ಗೌಸಿಯಾ ಕಾಲೋನಿ ಬಳಿ ಮೊನ್ನೆ ನಡೆದಿದೆ. ಸಹಾಯಕ ಪೊಲೀಸ್ ವರಿಷ್ಠಾಧಿಕಾರಿ ಕನ್ನಿಕಾ ಸಕ್ರಿವಾಲ್ ನೇತೃತ್ವದ ಪೊಲೀಸರ ತಂಡ ಅಂದಾಜು 630 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ಪಿಎಸ್ಐ ಸುರೇಶ್ ಎಸ್. ಎಎಸ್ಐಗಳಾದ ಯಾಸೀನ್ ಉಲ್ಲಾ, ಕರಿಬಸಪ್ಪ, ಪೇದೆಗಳಾದ ಅಬ್ದುಲ್ ಗಫಾರ್, ತಿಮ್ಮಪ್ಪ, ಚಾಲಕ ಅಜ್ಗರ್ ದಾಳಿಯಲ್ಲಿ ಭಾಗವಹಿಸಿದ್ದರು.

# ಅಗ್ನಿಪಥ್ ಯೋಜನೆ ದೇಶಕ್ಕೆ ಮಾರಕ

## ಜಗಳೂರಿನಲ್ಲಿ ಮಾಜಿ ಶಾಸಕ ಎಚ್.ಪಿ.ರಾಜೇಶ್ ಆತಂಕ

ಜಗಳೂರು, ಜೂ.27- ಕೇಂದ್ರದ ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಭಾರತೀಯ ಸೇನಾಪಡೆಗೆ ಯುವಕರ ನೇಮಕಾತಿಗೆ ಅಗ್ನಿಪಥ್ ಯೋಜನೆ ದೇಶಕ್ಕೆ ಮಾರಕವಾಗಿದೆ ಎಂದು ಮಾಜಿ ಶಾಸಕ ಎಚ್.ಪಿ. ರಾಜೇಶ್ ಆತಂಕ ವ್ಯಕ್ತಪಡಿಸಿದರು.



ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗ ವಿಧಾನಸಭಾ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್‌ನಿಂದ ಪಕ್ಷದಿಂದ ಕೇಂದ್ರ ಬಿಜೆಪಿ ಸರ್ಕಾರದ ಅಗ್ನಿಪಥ್ ಯೋಜನೆ ವಿರುದ್ಧ ಹಮ್ಮಿಕೊಂಡಿದ್ದ ಶಾಂತಿಯುತ ಸತ್ಯಾಗ್ರಹದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದೇಶಕ್ಕಾಗಿ ಪ್ರಾಣ ಮುಡಿಪಾಗಿಟ್ಟಿದ್ದ ರಕ್ಷಣಾ ಪಡೆಯ ಮುಖ್ಯಸ್ಥ ರಾವತ್ ಅವರ ವಿಮಾನ ಅಪಘಾತ, ಮೋದಿ ಅವರ ಆಡಳಿತ ವೈಖರಿಯನ್ನು ಬಿಂಬಿಸುತ್ತದೆ. ಇದೀಗ ಅಗ್ನಿ ಪಥ್ ಯೋಜನೆಯಡಿ ಯುವ ಸೈನಿಕರ ಸಾಮಾಜಿಕ ಭದ್ರತೆ ಕಸಿದುಕೊಳ್ಳುತ್ತಿದೆ ಎಂದರು.

ರಾಜ್ಯದಲ್ಲಿ ಪ್ರಸಕ್ತ ಸಾಲಿನ ಪಠ್ಯ ವಸ್ತುವಿನಲ್ಲಿ ಅಂಬೇಡ್ಕರ್, ಬಸವಣ್ಣ, ಕುವೆಂಪುರವರನ್ನು ಕಡೆಗಣಿಸಿ ಸ್ವಾರ್ಥಕ್ಕಾಗಿ ಇತಿಹಾಸ ತಿರುಚುವ ಹುನ್ನಾರ ನಡೆಯುತ್ತಿದೆ. ದೇಶದ ಪವಿತ್ರ ಗ್ರಂಥ ಸಂವಿಧಾನದ ವಿರುದ್ಧ ನಡೆದುಕೊಳ್ಳುತ್ತಿರುವುದು ಸರ್ವಾಧಿಕಾರದ ಪರಮಾವಧಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 7 ದಶಕಗಳಿಂದ ಹಸಿರು ಕ್ರಾಂತಿ ಸೇರಿದಂತೆ ಹಲವಾರು ಜನಪರ ಕಾಳಜಿ ಯೋಜನೆಗಳ ಮೂಲಕ ಕಾಂಗ್ರೆಸ್ ದೇಶದ ಜನತೆಗೆ ಸ್ವಾವಲಂಬಿ ಬದುಕು ಕಟ್ಟಿಕೊಟ್ಟಿತ್ತು. ಆದರೆ ಇದೀಗ ಮೋದಿ ಸರ್ಕಾರ ಭಾರತದ ಆಸ್ತಿಗಳನ್ನು ಖಾಸಗೀಕರಣ ವ್ಯಾಪಾರೀಕರಣಗೊಳಿಸುತ್ತಿದೆ ಎಂದು ಆರೋಪಿಸಿದರು.

ತಾಲ್ಲೂಕು ಉಸ್ತುವಾರಿ ಕಲ್ಲೇಶ್‌ರಾಜ್ ಪಟೇಲ್ ಮಾತನಾಡಿ, ಬಿಜೆಪಿ ಆಡಳಿತ ಸರ್ಕಾರ ದೇಶದ 1 ಲಕ್ಷದ 41 ಸಾವಿರ ಯುವಕರಿಗೆ ಉದ್ಯೋಗ ಕಲ್ಪಿಸುವ ಭರವಸೆ ಹುಸಿಯಾಗಿದೆ. ಕೂಡಲೇ ಉದ್ಯೋಗ ಒದಗಿಸಬೇಕು. ಸೇನೆ ಬಲ ವರ್ಧನೆ ಗೊಳಿಸಬೇಕು. ಅಗ್ನಿಫಥ್ ಯೋಜನೆಯನ್ನು ಕಾಂಗ್ರೆಸ್ ಪಕ್ಷ ವಿರೋಧಿಸುತ್ತದೆ ಎಂದರು.

ಸಂದರ್ಭದಲ್ಲಿ ಕೆಪಿಸಿಸಿ ಎಸ್‌ಟಿ ಘಟಕದ ಕೆ.ಪಿ. ಪಾಲಯ್ಯ, ಕಾಂಗ್ರೆಸ್ ಮುಖಂಡ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಲ್ಲಾಗಟ್ಟೆ ಶೇಖರಪ್ಪ, ಅರಸೀಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಮ್ಮತ್ತಹಳ್ಳಿ ಮಂಜುನಾಥ್, ಮುಖಂಡರಾದ ಯು.ಜಿ.ಶಿವಕುಮಾರ್, ಸಿ.ತಿಪ್ಪೇಸ್ವಾಮಿ, ರೇವಣ್ಣ, ಬಿ.ಲೋಕೇಶ್, ರೇವಣ್ಣ, ವಿಜಯ್ ಕೆಂಚೋಳ್, ರಮೇಶ್, ಮಹಿಳಾ ಘಟಕದ ಕೆಂಚಮ್ಮ ಧನ್ಯಕುಮಾರ್, ಸಾವಿತ್ರಮ್ಮ, ಮುಂತಾದವರು ಭಾಗವಹಿಸಿದ್ದರು.

### ಪರ್ಸೆಂಟೇಜ್ ಶಾಸಕರು: ಮಾಜಿ ಶಾಸಕರ ಆರೋಪ

ವಿಧಾನ ಸಭಾ ಕ್ಷೇತ್ರದಲ್ಲಿ ಉತ್ತಮವಾದ ರಸ್ತೆಗಳನ್ನು ಕಿತ್ತುಹಾಕಿ ಪುನಃ ಅಭಿವೃದ್ಧಿ ಹೆಸರಿನಲ್ಲಿ ಡಾಂಬರ್ ಹಾಕುವುದು ಹಾಗೂ ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಮತ್ತು 15 ನೇ ಹಣಕಾಸು ಯೋಜನೆಯಲ್ಲಿ ಶಾಸಕ ಎಸ್.ವಿ. ರಾಮಚಂದ್ರ ಅವರು ಪರ್ಸೆಂಟೇಜ್ ಪಡೆದಿದ್ದಾರೆ. ಮುಖ್ಯಮಂತ್ರಿಗಳ ಸರ್ಕಾರಿ ಕಾರ್ಯಕ್ರಮಗಳನ್ನು ಬಿಜೆಪಿ ಸಮಾವೇಶಗಳಂತೆ ನಡೆಸಿ ಅದರಲ್ಲೂ ಅಧಿಕಾರಿಗಳಿಂದ ಹಣ ಪಡೆದಿದ್ದಾರೆ. ಅಲ್ಲದೆ ಕ್ಷೇತ್ರದ ಆಡಳಿತ ವೈಫಲ್ಯ ಕಂಡಿದೆ ಎಂದು ಮಾಜಿ ಶಾಸಕರು ಆರೋಪಿಸಿದರು.

# ಧರ್ಮಸ್ಥಳ ಯೋಜನೆಯಡಿ 2500 ಕೋಟಿ ರೂ. ಉಳಿತಾಯ ಮಾಡಿರುವ ಗ್ರಾಮೀಣ ಮಹಿಳೆಯರು

### ಹೊಳೆಸಿರಿಗೆರೆ : ವಿಕಲಚೇತನರಿಗೆ ಸೌಲಭ್ಯ ವಿತರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ನಿರ್ದೇಶಕ ವಿಜಯಕುಮಾರ್

ಮಲೇಬೆನ್ನೂರು, ಜೂ.27- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಕಳೆದ 40 ವರ್ಷಗಳಲ್ಲಿ ರಾಜ್ಯದ ಗ್ರಾಮೀಣ ಮಹಿಳೆಯರು 2500 ಕೋಟಿ ರೂ. ಉಳಿತಾಯ ಮಾಡಿದ್ದಾರೆ ಎಂದು ಯೋಜನೆಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ತಿಳಿಸಿದರು.

ಹೊಳೆಸಿರಿಗೆರೆ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 'ಜನಮಂಗಲ' ಕಾರ್ಯಕ್ರಮದಡಿ ಇಂದು ಏರ್ಪಾಡಾಗಿದ್ದ 20 ವಿಕಲ ಚೇತನರಿಗೆ ವ್ಹೀಲ್‌ಚೇರ್, ಸ್ಟಿಕ್, ವಾಟರ್ ಬೆಡ್ ಸೇರಿದಂತೆ ಅಗತ್ಯ ಸಾಮಾನುಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಧರ್ಮಸ್ಥಳ ಯೋಜನೆ ಮೂಲಕ ಸ್ವ-ಸಹಾಯ ಸಂಘಗಳನ್ನು ಕೇವಲ ಸಾಲ ಕೊಡುವುದಕ್ಕಾಗಿ ರಚನೆ ಮಾಡಿಲ್ಲ. ಗ್ರಾಮೀಣ ಜನರ ಬದುಕನ್ನು ಸಮಗ್ರವಾಗಿ ಬದಲಾವಣೆ ಹಾಗೂ ಬಲವರ್ಧನೆಗೊಳಿಸುವುದಕ್ಕಾಗಿ ಸಂಘಗಳನ್ನು ರಚಿಸಿ, ಆ ಮೂಲಕ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದೇವೆ ಎಂದು ವಿಜಯಕುಮಾರ್ ಸ್ಪಷ್ಟಪಡಿಸಿದರು.

ಪುರುಷರಿಗಾಗಿ ಪ್ರಗತಿ ಬಂಧು ಸ್ವ-ಸಹಾಯ ಸಂಘಗಳನ್ನು ರಚನೆ ಮಾಡಿದ್ದು, ದೇಶದಲ್ಲಿ ಪ್ರಥಮವಾಗಿದೆ. ರಾಜ್ಯದಲ್ಲಿ 17 ಸಾವಿರ ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ನೀಡುತ್ತಿದ್ದು, 15 ಸಾವಿರ ಜನರಿಗೆ ಪ್ರತಿ ತಿಂಗಳು ಒಬ್ಬರಿಗೆ 1 ಸಾವಿರ ರೂ. ಮಾಸಾಶನ ಕೊಡುತ್ತಿದ್ದೇವೆ. 'ವಾತ್ಸಲ್ಯ' ಕಾರ್ಯಕ್ರಮದಡಿ ನಿರ್ಗತಿಕರಿಗೆ ಉಚಿತವಾಗಿ ಮನೆ ಕಟ್ಟಿಸಿಕೊಡುತ್ತಿದ್ದು, ಜೊತೆಗೆ ನೊಂದವರಿಗಾಗಿ ಸಾಂತ್ವನ, ಸಹಾಯ ಮಾಡುವ ಕೆಲಸವನ್ನೂ ಧರ್ಮಸ್ಥಳ ಯೋಜನೆ ಮಾಡುತ್ತಿದೆ.



ನಮ್ಮ ಯೋಜನೆಯ ಸೌಲಭ್ಯಗಳು ಜಾತಿ, ಧರ್ಮ, ಪಂಥ ಇಲ್ಲದೇ ಅರ್ಹ ಫಲಾನುಭವಿಗಳಿಗೆ ಲಭ್ಯವಾಗುತ್ತಿವೆ. ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ನಾವು ದುಡಿದು, ಉಳಿತಾಯ ಮಾಡಿ ಚೆನ್ನಾಗಿ ಓದಿಸಿದರೆ ಅವರು ಮುಂದೆ ದೇಶದ ಆಸ್ತಿ ಆಗುತ್ತಾರೆ ಎಂದು ಜಿಲ್ಲಾ ನಿರ್ದೇಶಕ ವಿಜಯಕುಮಾರ್ ಹೇಳಿದರು.

ಗ್ರಾಮದ ಹಿರಿಯ ಮುತ್ಸದ್ಧಿ ಎನ್.ಜಿ. ನಾಗನಗೌಡ್ರು ಮಾತನಾಡಿ, ನಮ್ಮ ಜಿಲ್ಲೆಯಲ್ಲಿ ಕಳೆದ 12 ವರ್ಷಗಳಿಂದ ಈ ಯೋಜನೆ ಕಾರ್ಯ ನಿರ್ವಹಿಸುತ್ತಿದ್ದು, ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಸಾಕಷ್ಟು ಬದಲಾವಣೆ ತಂದಿದೆ.

ಅಡುಗೆ ಮನೆಯಲ್ಲಿದ್ದ ಹೆಣ್ಣು ಮಕ್ಕಳಿಗೆ ಬ್ಯಾಂಕ್ ವ್ಯವಹಾರ ಕಲಿತುಕೊಳ್ಳುವಂತೆ ಮಾಡಿದೆ. ಸರ್ಕಾರ ಮಾಡಬೇಕಾಗಿದ್ದ ಕೆಲಸಗಳನ್ನು ಈ ಯೋಜನೆ ಮೂಲಕ ಶ್ರೀ ವೀರೇಂದ್ರ ಹೆಗ್ಗಡೆ ಅವರು ಮಾಡುತ್ತಿದ್ದಾರೆ. ಈ ಯೋಜನೆ ಜಗತ್ತಿಗೇ ಮಾದರಿ ಎಂದು ನಾಗನಗೌಡ್ರು ಮೆಚ್ಚುಗೆ ವ್ಯಕ್ತಪಡಿಸಿದರು.

ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಒಕ್ಕೂಟದ ಅಧ್ಯಕ್ಷರಾದ ಶ್ರೀಮತಿ ಯಶೋಧ, ಶ್ರೀಮತಿ ಅಕ್ಕಮ್ಮ, ಪತ್ರಕರ್ತ ಜಿಗಳಿ ಪ್ರಕಾಶ್ ಮತ್ತಿತರರು ಭಾಗವಹಿಸಿದ್ದರು.

ಹೊಳೆಸಿರಿಗೆರೆ ವಲಯ ಮೇಲ್ವಿಚಾರಕಿ ಶ್ರೀಮತಿ ನಂದಾ ಸ್ವಾಗತಿಸಿದರು. ಸ್ಥಳೀಯ ಸೇವಾ ಪ್ರತಿನಿಧಿ ಮಂಜುಳಾ ವಂದಿಸಿದರು.

## ಆಶಿಕ್ ಬ್ರೈನ್ ಡೆವೆಲಪ್ ಸೆಂಟರ್ ವಿದ್ಯಾರ್ಥಿಗಳ ಉತ್ತಮ ಸಾಧನೆ



ರಾಣೇಬೆನ್ನೂರು, ಜೂ.27- ಬೆಂಗಳೂರಿನ ಸ್ವೀಪ್ ಅಕಾಡೆಮಿ ವತಿಯಿಂದ ನಡೆದ ರಾಜ್ಯ ಮಟ್ಟದ ಆನ್‌ಲೈನ್ ಕಾಂಪಿಟೇಶನ್‌ನಲ್ಲಿ ನಗರದ ಆಶಿಕ್ ಬ್ರೈನ್ ಡೆವೆಲಪ್ ಸೆಂಟರ್‌ನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳಾದ ಸುಮುಖ್ ಜಿ.ವಿ., ಧೀರಜ್ ದೊಡ್ಮನಿ, ನಿನಾದ್ ಟಿ., ಅಶ್ವಿನ್ ಕುಮಾರ್, ರಕ್ಷಾ ಹಾದಿಮನಿ, ಮೊಹಮ್ಮದ್ ಜಮಾಲ್, ಯಶವಂತ್ ಪಿ.ಎಂ., ದೀಪ್ತಿ ಬಿ., ಪುಣ್ಯ ಎಲ್.ಕೆ., ಸೃಜನ್ ಬಡಿಗೇರ್, ಶೈನಿ ಕಟಿಗಿ, ಅದ್ವೈತ್, ವಿಜೇತ ಬುಳ್ಳಾಪುರ, ಬಸವರಾಜ ಮಾಕನೂರುಮಠ, ಯಶವಂತ ಓಲೇಕಾರ್, ಪ್ರಣವ್ ಬಸವನಾಳ ಮಠ್, ಸಂಜಿತ್ ಓಲೇಕಾರ್, ಕೆ.ಬಿ. ಸನ್ನಿಧಿ ಹಾಗೂ ರಾಷ್ಟ್ರ ಮಟ್ಟದ ಆನ್‌ಲೈನ್ ಕಾಂಪಿಟೇಶನ್‌ನಲ್ಲಿ ಪ್ರಶಸ್ತಿ ಪಡೆದ ಶ್ರೇಯಸ್ ಸಾಹುಕಾರ್ ಅವರ ಸಾಧನೆಗೆ ಸಂಸ್ಥೆಯ ಮುಖ್ಯಸ್ಥೆ ಗೀತಾ ರೆಡ್ಡಿ ಹಾಗೂ ಸಿಬ್ಬಂದಿ ವರ್ಗ ಮೆಚ್ಚುಗೆ ವ್ಯಕ್ತಪಡಿಸಿದೆ.

## ಹಳೆಪೇಟೆ ಸ.ಉ.ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಯೋಗ ದಿನಾಚರಣೆ



ದಾವಣಗೆರೆ, ಜೂ. 27- ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನಗರದ ಹಳೆಪೇಟೆಯ ಶತಮಾನದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಯೋಗ ದಿನಾಚರಣೆ ನಡೆಸಲಾಯಿತು.

ಯೋಗ ಕಾರ್ಯಕ್ರಮಕ್ಕೆ ದೈಹಿಕ ಶಿಕ್ಷಕಿ ಸುಜಾತ ಮತ್ತು ಇಂಗ್ಲಿಷ್ ಶಿಕ್ಷಕಿ ನಮಿತಾ ಎಂ.ಎನ್. ಮಾರ್ಗದರ್ಶನ ಮಾಡಿದರು. 6ನೇ ತರಗತಿ ವಿದ್ಯಾರ್ಥಿ ಆರ್. ಪೃಥ್ವಿ ದಾಸರ್ ಮತ್ತು ಇತರೆ ವಿದ್ಯಾರ್ಥಿಗಳು ಗಿಡಗಳಿಗೆ ನೀರು ಹಾಕುವ ಮೂಲಕ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಬಿ.ಆರ್.ಪಿ. ಶೋಭ, ಶಾಲೆಯ ಮುಖ್ಯ ಶಿಕ್ಷಕರಾದ ಕೆ.ಎಂ. ಶೋಭ, ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷ ಕೋಡಬಾಳ್ ಚನ್ನಬಸಪ್ಪ, ಜಿಲ್ಲಾ ಶಾಲಾಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯ ಜಿಲ್ಲಾ ಪತ್ರಿಕಾ ಕಾರ್ಯದರ್ಶಿ ರಮೇಶ್ ಸಿ. ದಾಸರ್, ಇಂಗ್ಲಿಷ್ ಶಿಕ್ಷಕಿ ನಮಿತಾ, ಎಂ.ಎನ್.ಮತ್ತು ಶಿಕ್ಷಕಿಯರಾದ ಮಮತ ಡಿ.ಜಿ. ವಿಜಯಕುಮಾರಿ, ಸಂಪತ್‌ಕುಮಾರಿ, ಕಲ್ಪನ, ಸುಜಾತ ಜಯಶ್ರೀ ಉಪಸ್ಥಿತರಿದ್ದರು.

## ಎಸ್‌ಟಿಜೆ ವಿದ್ಯಾರ್ಥಿಗಳ ಆಯ್ಕೆ



ರಾಣೇಬೆನ್ನೂರು, ಜೂ. 27- ನಗರದ ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಕ್ಯಾಂಪಸ್ ಸಂದರ್ಶನದಲ್ಲಿ ಬೆಂಗಳೂರಿನ ಕೋಡ್‌ನೆಸ್ಟ್ 9 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳಿಗೂ ಎಸ್‌ಟಿಜೆ ತಾಂತ್ರಿಕ ಮಹಾವಿದ್ಯಾಲಯದ ಪ್ರಭಾರಿ ಪ್ರಾಂಶುಪಾಲ ಡಾ. ಎಸ್. ಜಿ. ಮಾಕನೂರ, ಡೀನ್ ಅಕಾಡಮಿಕ್ ಡಾ. ಡಿ.ಎಸ್. ವಿಶ್ವನಾಥ ಮತ್ತು ಇತರರು ಅಭಿನಂದಿಸಿದ್ದಾರೆ.


**ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಭಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.
96205 95579, 87924 53686

**ಮನೆಗಳು ಬಾಡಿಗೆಗೆ ಇವೆ**
ವಿದ್ಯಾನಗರ, ತರಳಬಾಳು ಬಡಾವಣೆಯಲ್ಲಿ 3 ಬೆಡ್ ರೂಂ ಮನೆಗಳು ಬಾಡಿಗೆಗೆ ಇವೆ.
1/2 ಪರ್ಸೆಂಟ್ ಕಮೀಷನ್ ಆಧಾರದ ಮೇಲೆ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಸೂರ್ಯ ನವೋದಯ**
(4ನೇ ಮತ್ತು 5ನೇ ತರಗತಿ ಮಕ್ಕಳಿಗೆ)
ತರಗತಿಗಳು ಈಗಷ್ಟೇ ಪ್ರಾರಂಭವಾಗುತ್ತಿವೆ. ಸ್ಥಳ. K.S.S ಕಾಲೇಜು ಸರಸ್ವತಿ ಬಡಾವಣೆ ದಾವಣಗೆರೆ.
ಸಮಯ ಬೆಳಗ್ಗೆ 6.15 ರಿಂದ 7.45
ಸ್ಥಳ : ಕಾಮ್ರೆಡ್ ಲೇನಿನ್ ಶಾಲೆ ಡಾಂಗೇ ಪಾರ್ಕ್ ಹತ್ತಿರ, ದಾವಣಗೆರೆ. ಸಮಯ ಸಂಜೆ 5.15 ರಿಂದ 6.45
ಶ್ರೀ ಸುರೇಷ ಸಿ. ಮುರಗಿ Msc. B.Ed
99028 24909, 98447 48763

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಬೆಡ್ ರೂಂ, ಪೂಜಾ ರೂಂ ಇರುವ ಏಲೂವರೆ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಬಾಡಿಗೆಗಿದೆ. ಸಂಪರ್ಕಿಸಿ.
79750 35395

**ಮಾರಾಟಕ್ಕಿದೆ FOR SALE**
2019ರ ಮಾಡೆಲ್‌ನ Innova ಕಾರು ಮಾರಾಟಕ್ಕೆ ಇದೆ.
ಆಸಕ್ತರು ಸಂಪರ್ಕಿಸಿ.
72599 83162

**ಮಣಿಪಾಲ್ ಆರೋಗ್ಯ ಕಾರ್ಡ್**
ರಿನೀವಲ್ ಮತ್ತು ಹೊಸ ಕಾರ್ಡ್ ಮಾಡಿಸಿಕೊಳ್ಳಲು 30.6.2022 ಕೊನೆಯ ದಿನಾಂಕ.
ಸಂಪರ್ಕಿಸಿ :
ಮಣಿಪಾಲ್ ಮಾಹಿತಿ ಕೇಂದ್ರ,
ತ್ರಿಶೂಲ್ ಟಾಕೀಸ್ ರಸ್ತೆ, ಕಾವೇರಮ್ಮ ಶಾಲೆಯ ಹತ್ತಿರ, ಕೆ.ಬಿ ಬಡಾವಣೆ, ದಾವಣಗೆರೆ.
89042 19373

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟು ಮಾರಾಟಕ್ಕೆ ಇದೆ**
ಯಲ್ಲಮ್ಮನಗರ ರಿಂಗ್ ರೋಡ್ ಹತ್ತಿರ, 3ನೇ ಕ್ರಾಸ್‌ನಲ್ಲಿ 16x55 sq.ft ಅಳತೆಯ ದಕ್ಷಿಣ ದಿಕ್ಕಿನ ಸೈಟು ಮಾರಾಟಕ್ಕೆ ಇದೆ.
ಸಂಪರ್ಕಿಸಿ :
93421 50040

**ಸೈಟುಗಳು ಮಾರಾಟಕ್ಕಿವೆ**
ಬಾಲಾಜಿ ಲೇಔಟ್‌ನಲ್ಲಿ 30x50 ಉತ್ತರ, ಶಿವ-ಪಾರ್ವತಿ ಬಡಾವಣೆಯಲ್ಲಿ 30x54 ಪೂರ್ವ, ಡಾಲರ್ಸ್ ಕಾಲೋನಿಯಲ್ಲಿ 30x50 ಉತ್ತರ. ಹೊಸಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮೊಬೈಲ್ ಕಳೆದಿದೆ**
ದಾವಣಗೆರೆ ವಿದ್ಯಾನಗರದ ಮೂರನೇ ಬಸ್‌ಸ್ಟಾಪ್ ಸುತ್ತ-ಮುತ್ತ 'REAL ME' ಎಂಬ ಮೊಬೈಲ್ ಕಾಣೆಯಾಗಿದೆ. ಸಿಕ್ಕವರು ತಂದು ಕೊಟ್ಟರೆ 2000/- ರೂಪಾಯಿ ಬಹುಮಾನ ಕೊಡಲಾಗುವುದು. ಸಿಕ್ಕವರು ಈ ನಂಬರ್‌ಗೆ ಫೋನ್ ಮಾಡಿರಿ.
ಜಿ. ನರೇಂದ್ರರಾವ್
96326 89119

**Room To-Let**
For Boys Student Only.
BIET Circle
Vivekananda Badavane,
Davanagere. 577004
M : 98868 44501

**Sandeep Rexine House**
ಕಂತಿನ ಸೌಲಭ್ಯ
1) Duroflex Bed, 2) Comfort Sleep Bed, 3) Restolex ಬೆಡ್‌ಗಳು ಮತ್ತು ಕಿಟಕಿ ಹಾಗೂ ವೆಂಟಿಲೇಟರ್‌ಗಳಿಗೆ ಸೊಳ್ಳೆ ಮೆಶ್ ಹಾಕುತ್ತೇವೆ.
Sudeep S.Hiremath
98860 26813

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಮಹಿಳೆಯರು Experience ಆಗಿರುವವರು ಬೇಕಾಗಿದ್ದಾರೆ. (ಪೆಟ್ರೋಲ್ & ಡೀಸೆಲ್ ಹಾಕುವವರು) ಮತ್ತು ಮ್ಯಾನೇಜರ್ ಬೇಕಾಗಿದ್ದಾರೆ.
ಆಕರ್ಷಕ ಸಂಬಳವಿರುತ್ತದೆ. ಸಂಪರ್ಕಿಸಿ :
94821 09492, 94807 77338

**ಸಿಂಗಲ್ ಬೆಡ್ ರೂಂ ಮನೆ ಲೀಸ್‌ಗೆ ಇದೆ**
1ನೇ ಮಹಡಿ, 1ನೇ ಮೇನ್, 3ನೇ ಕ್ರಾಸ್, ನಿಟುವಳ್ಳಿ ಹೊಸ ಬಡಾವಣೆ, ದಾವಣಗೆರೆ.
76768 55957

**WANTED**
WORKING PHARMACIST
Qualification : D. Pharma/B. Pharma, Salary Scale : Rs.12000 to 16000
Darshan Gowda: Address : Kaveri Medihouse (P) Ltd
Near Chethana Hotel, P.J Extension, Davangere.
M : 9035503140

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
97432 17566, 91084 18233

**ಖರೀದಿಗೆ ಬೇಕಾಗಿದೆ**
ಉತ್ತಮ ಸ್ಥಿತಿಯಲ್ಲಿರುವ ರೆಸ್ಟೋರೆಂಟ್ ಕಿಚನ್ ಐಟಂಗಳು ಖರೀದಿಗೆ ಬೇಕಾಗಿವೆ.
97392 94066

**WANTED**
Female Telecallers -10 No.s
(Any Graduate : Fresher / Experianced)
communication skill is must Contact.
Kesari Technologies
#2756/6, 3rd Main, 4th Cross, MCC 'B' Block, Davanagere-577004
M : 97433 41341

**ಮನೆ ಬಾಡಿಗೆಗೆ ಇದೆ**
2BHK ಮುನ್ಸಿಪಲ್ /ಬೋರ್ ನೀರಿನ ಹಾಗೂ ಸೋಲಾರ್ / UPS ಸೌಲಭ್ಯವಿರುವ ಮನೆ ನಿಜಲಿಂಗಪ್ಪ ಬಡಾವಣೆ 10ನೇ ಕ್ರಾಸ್ (ಅಮೃತಾನಂದಮಯಿ ಸ್ಕೂಲ್ ಹತ್ತಿರ) ಬಾಡಿಗೆಗೆ ಇದೆ.ಆಸಕ್ತರು ಸಂಪರ್ಕಿಸಿ.
94482 16834

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. P U C or any DEGREE,
ವಿಳಾಸ : ಕಾವೇರಿ ಫಾರ್ಮಾ
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ. 577002

**WANTED**
Sales Executive
Qualification : Any Degree
Contact : SBL Batteries
Vinobha nagar, 3rd Main Corner, P.B Road, Davanagere.
M : 99019 08586

**ಅಡುಗೆಯವರು ಬೇಕಾಗಿದ್ದಾರೆ**
ಮಾಂಸದೂಟದ ಅಡುಗೆ ಮಾಡುವವರು, ಉತ್ತರ ಭಾರತೀಯ ಅಡುಗೆಯವರು ಮತ್ತು ತಂದೂರಿ ಅಡುಗೆಯವರು ಬೇಕಾಗಿದ್ದಾರೆ.
ಸಂಪರ್ಕಿಸಿ:
95354 44369

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟೈಸರ್ ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ಅನುಭವವಿದ್ದವರಿಗೆ ಆದ್ಯತೆ.
97388 27452, 74110 25934

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**II PU TUITION SUPPLEMENTARY**
SCIENCE COMMERCE 100% Result
K-CET, NEET
Long Term Coaching
WINNERS CAREER ACADEMY
COACHING CENTRE FOR ALL EXAMS
Near Stadium, P.J. Extn., Davangere
9886997892, 9148596892

**SPECIAL COACHING**
PUC Failed Students 100% Result
K-CET, NEET
Long Term Coaching
Hostel Facility Available
SINCHAN COACHING CENTER
Near SBI ATM, Ram & Co Circle, Davangere
8861445913, 9019580600

**ಸಾಲಗಳಿಗಾಗಿ ಸಂಪರ್ಕಿಸಿ**
ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :
99455 22287

**ಯುಕ್ತ ಕೌಶಲ್ಯ ತರಬೇತಿ ಕೇಂದ್ರ**
ಹಾಗೂ ಕಲರ್ಸ್ ಟೆಕ್ನಾಲಜಿ ಇವರುಗಳ ಸಹಯೋಗದಿಂದ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಅರ್ಜಿ ಆಹ್ವಾನ
https://forms.gle/eJceAjgM4Mu6Fc887
ಕೊನೆಯ ದಿನಾಂಕ. 30.6.2022 ಹೆಚ್ಚಿನ ಮಾಹಿತಿಗಾಗಿ
87470 68888, 63662 73089
88677 54672

**WANTED**
1. Staff Nurses
2. Lab Technician
Pls Contact :
98440 65638

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC
Degree, Pharmacy & BHMS
(Government & Private Collage)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87620 58369, 90080 67049

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**MBBS**
Aspirants looking for admission in Russia, with low budget, call or visit
+91 7022 321 123
www.doctorsquery.com

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.**
Tally ಬಲ್ಲವರಿಗೆ ಆದ್ಯತೆ.
ರಾಮದೂತ ಎಂಟರ್ ಪ್ರೈಸಸ್
97388 27452, 74110 25934

**Work From Home**
Male/ Female,
Full / Part time Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ ಮತ್ತು ರಾಣೇಬೆನ್ನೂರು ಸುತ್ತ-ಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ESI, PF ಸೌಲಭ್ಯ ಇದೆ.
ಹೈ ಅಲರ್ಟ್ ಸೆಕ್ಯೂರಿಟಿ ಸರ್ವೀಸ್.
ಮುಸ್ಲಿಂ ಹಾಸ್ಟೆಲ್, ದಾವಣಗೆರೆ
78990 15677, 96113 94063

**REQUIRED**
BOYS/ GIRLS HOSTEL WARDEN, DRIVER
LOCATION: DAVANGERE
CONTACT :
82176 27780, 91108 26144

# ಮಂಡ್ಯ ಶಾಸಕ ಶ್ರೀನಿವಾಸ್ ವಿರುದ್ಧ ಕ್ರಮಕ್ಕೆ ಕುರುಹಿನ ಶೆಟ್ಟಿ ಸಮಾಜದವರ ಒತ್ತಾಯ



**ಹರಿಹರ**

ಹರಿಹರ, ಜೂ. 27 - ಮಂಡ್ಯ ಶಾಸಕ ಎಂ. ಶ್ರೀನಿವಾಸ್ ಅವರು ಅಲ್ಲಿನ ಐಟಿಐ ಕಾಲೇಜಿನ ಪ್ರಾಂಶುಪಾಲರ ಮೇಲೆ ವಿನಾಕಾರಣ ಹಲ್ಲೆ ನಡೆಸಿದ್ದಾರೆಂದು ದೂರಿರುವ ನಗರದ ಕುರುಹಿನಶೆಟ್ಟಿ ಸಮಾಜದವರು, ಕ್ರಮಕ್ಕೆ ಒತ್ತಾಯಿಸಿ ತಹಶೀಲ್ದಾರ್ ಶಶಿಧರ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಈ ವೇಳೆ ಮಾತನಾಡಿದ ಮುಖಂಡರು, ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಈ ಕೂಡಲೇ ಅವರ ಶಾಸಕ ಸ್ಥಾನವನ್ನು ವಜಾ ಗೊಳಿಸಬೇಕೆಂದು ಆಗ್ರಹಿಸಿದರು.

ಸಮಾಜದ ಅಧ್ಯಕ್ಷ ಬಸವರಾಜ್ ಇಂಡಿ, ಗೌರವಾಧ್ಯಕ್ಷ ನಾಗರಾಜ್ ಭಂಡಾರಿ, ಮುಖಂಡರಾದ ಅಣ್ಣಪ್ಪ ಶ್ಯಾವಿ, ದಾವಣಗೆರೆ ಸಮಾಜದ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ಇಂಡಿ, ರಾಜು ಐರಣಿ, ಚಂದ್ರಪ್ಪ ಭಂಡಾರಿ, ಬೆನಕಪ್ಪ, ರಾಮಣ್ಣ ಮ್ಯಾಳ, ಚಂದ್ರು ಅಮ್ರುದ್, ರಾಜು ಅಮ್ರುದ್, ಶಾಂತಪ್ಪ, ನಿಂಗರಾಜ್ ಡಿ.ವಿ.ಜಿ., ಶ್ರೀನಿವಾಸ್ ಚಾಕಣಿ, ಚಂದ್ರಪ್ಪ ಗೋವಿಂದ್ ಗದ್ದದ್, ಭಾರತಿ ಶ್ಯಾವಿ, ವಿದ್ಯಾ ಗದ್ದದ್, ಸಂಜಯ್ ಗದ್ದದ್, ಮಂಜುನಾಥ್ ಬುಟ್ಟಾ, ನಾಗರಾಜ್ ಇಂಡಿ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

## ಸ್ವಪ್ನ ಎಜುಕೇಶನ್ ಟ್ರಸ್ಟ್ ನಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜೂ. 27- ಪಿಯುಸಿಯಲ್ಲಿ 90% ಕ್ಕಿಂತ ಹೆಚ್ಚು ಅಂಕ ಪಡೆದ ಬಡ ಕುಟುಂಬದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಸ್ವಪ್ನ ಎಜುಕೇಶನ್ ಟ್ರಸ್ಟ್ ನ ಗೌರವ ಕಾರ್ಯದರ್ಶಿ ಆರ್. ಗಂಗಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ ಅರ್ಜಿಯನ್ನು 88614 38237, 63603 92458 ಈ ನಂಬರ್‌ಗೆ ಸಂಪರ್ಕಿಸಿ ಸಲ್ಲಿಸಲು ಟ್ರಸ್ಟ್ ಅಧ್ಯಕ್ಷ ನಾರಾಯಣ್ ರಾವ್ ತಿಳಿಸಿದ್ದಾರೆ.

# ಜುಲೈ 1ರಿಂದ ಏಕ ಬಳಕೆ ಪ್ಲಾಸ್ಟಿಕ್ ಮೇಲೆ ಇನ್ನಷ್ಟು ಕಡಿವಾಣ

ದಾವಣಗೆರೆ, ಜೂ. 27 - ಏಕ ಬಳಕೆಯ ಪ್ಲಾಸ್ಟಿಕ್ ತಡೆಯುವಲ್ಲಿ ಮತ್ತೊಂದು ಹೆಜ್ಜೆ ಇಟ್ಟಿರುವ ರಾಜ್ಯ ಸರ್ಕಾರ, ಬರುವ ಜುಲೈ 1ರಿಂದ ಹಲವಾರು ಪ್ಲಾಸ್ಟಿಕ್ ವಸ್ತುಗಳ ಮೇಲೆ ನಿಷೇಧ ಹೇರಲಿದೆ.

ಕಡಿಮೆ ಉಪಯುಕ್ತತೆ ಹೊಂದಿರುವ ಹಾಗೂ ಹೆಚ್ಚು ಕಸಕ್ಕೆ ಕಾರಣವಾಗುವ ಏಕ ಬಳಕೆಯ ಪ್ಲಾಸ್ಟಿಕ್‌ಗಳನ್ನು ಗುರಿಯಾಗಿಟ್ಟುಕೊಂಡು ನಿಷೇಧದ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ.

ಈ ಹಿಂದೆ 2016ರಿಂದಲೇ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್, ಪ್ಲಾಸ್ಟಿಕ್ ಬ್ಯಾನರ್‌ಗಳು, ಪ್ಲಾಸ್ಟಿಕ್ ಬಂಟಿಂಗ್ಸ್, ಪ್ಲಾಸ್ಟಿಕ್ ಫ್ಲೆಕ್ಸ್, ಪ್ಲಾಸ್ಟಿಕ್ ಪ್ಲೇಟ್‌ಗಳು, ಪ್ಲಾಸ್ಟಿಕ್ ಧ್ವಜಗಳು, ಪ್ಲಾಸ್ಟಿಕ್ ಕಪ್‌ಗಳು, ಪ್ಲಾಸ್ಟಿಕ್ ಸ್ಪೂನ್‌ಗಳು, ಅಂಟಿಕೊಳ್ಳುವ ಫಿಲ್ಮ್‌ಗಳು, ಎಲ್ಲಾ ದಪ್ಪದ ಡೈನಿಂಗ್ ಟೇಬಲ್‌ನಲ್ಲಿ ಹರಡಲು ಬಳಸುವ ಪ್ಲಾಸ್ಟಿಕ್ ಹಾಳೆಗಳು, ಸ್ಟ್ರಾಗಳು, ಥರ್ಮಾಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಮಣಿಗಳಿಂದ ಮಾಡಿದ ವಸ್ತುಗಳನ್ನು ನಿಷೇಧಿಸಲಾಗಿತ್ತು.

ಮುಂದಿನ ಹಂತದಲ್ಲಿ ಬರುವ ಜುಲೈ 1ರಿಂದ ಪ್ಲಾಸ್ಟಿಕ್ ಪ್ಲೇಟ್, ಪ್ಲಾಸ್ಟಿಕ್ ಕಪ್, ಲೋಟ, ಫೋರ್ಕ್, ಪ್ಲಾಸ್ಟಿಕ್ ಚಮಚ, ಚಾಕು, ಪ್ಲಾಸ್ಟಿಕ್ ಟ್ರೇ ಸೇರಿದಂತೆ ಹಲವಾರು ಪ್ಲಾಸ್ಟಿಕ್ ವಸ್ತುಗಳು ನಿಷೇಧದ ವ್ಯಾಪ್ತಿಗೆ ಬರಲಿವೆ.

ಎಲ್ಲಾ ವಸ್ತುಗಳ ಉತ್ಪಾದಕರು, ದಾಸ್ತಾನುದಾರರು, ಚಿಲ್ಲರೆ ವ್ಯಾಪಾರಿಗಳು, ಅಂಗಡಿ ಮಾಲೀಕರುಗಳು, ಇ-ಕಾಮರ್ಸ್ ಕಂಪನಿಗಳು, ಬೀದಿ ವ್ಯಾಪಾರಿಗಳು, ವಾಣಿಜ್ಯ ಸಂಸ್ಥೆಗಳು, ಮಾಲ್‌ಗಳು, ಮಾರುಕಟ್ಟೆ ಸ್ಥಳ,

### ಜುಲೈ 1ರಿಂದ ನಿಷೇಧವಾಗಲಿರುವ ಏಕಬಳಕೆಯ ಪ್ಲಾಸ್ಟಿಕ್ ವಸ್ತುಗಳು

**ಪ್ಲಾಸ್ಟಿಕ್ ಕಡ್ಡಿಗಳು :** ಪ್ಲಾಸ್ಟಿಕ್ ಸ್ಟಿಕ್‌ಗಳೊಂದಿಗೆ ಇಯರ್ ಬಡ್‌ಗಳು, ಬಲೂನ್‌ಗಳಿಗೆ ಬಳಸುವ ಪ್ಲಾಸ್ಟಿಕ್ ಸ್ಟಿಕ್‌ಗಳು, ಪ್ಲಾಸ್ಟಿಕ್ ಧ್ವಜಗಳು, ಪ್ಲಾಸ್ಟಿಕ್ ಕ್ಯಾಂಡಿ ಸ್ಟಿಕ್‌ಗಳು, ಪ್ಲಾಸ್ಟಿಕ್ ಐಸ್‌ಕ್ರೀಮ್ ಸ್ಟಿಕ್‌ಗಳು, ಅಲಂಕಾರಕ್ಕಾಗಿ ಬಳಸುವ ಪಾಲಿಸ್ಟೆರೀನ್ (ಥರ್ಮಾಕೋಲ್).

**ತಿನಿಸಿಗೆ ಸಂಬಂಧಿಸಿದ ವಸ್ತುಗಳು :** ಪ್ಲಾಸ್ಟಿಕ್ ಪ್ಲೇಟ್‌ಗಳು, ಪ್ಲಾಸ್ಟಿಕ್ ಕಪ್‌ಗಳು ಮತ್ತು ಲೋಟಗಳು, ಫೋರ್ಕ್‌ಗಳು, ಪ್ಲಾಸ್ಟಿಕ್ ಚಮಚಗಳು, ಪ್ಲಾಸ್ಟಿಕ್ ಚಾಕುಗಳು, ಪ್ಲಾಸ್ಟಿಕ್ ಟ್ರೇಗಳಂತಹ ಕಟ್ಲರಿಗಳು.

**ಪ್ಯಾಕಿಂಗ್ :** ಸ್ವೀಟ್ ಬಾಕ್ಸ್‌ಗಳ ಸುತ್ತ ಸುತ್ತುವ ಅಥವಾ ಪ್ಯಾಕಿಂಗ್ ಫಿಲ್ಮ್‌ಗಳು, ಆಮಂತ್ರಣ ಪತ್ರಗಳು ಮತ್ತು ಸಿಗರೇಟ್ ಪ್ಯಾಕೆಟ್‌ಗಳು.

**ಇತರೆ ವಸ್ತುಗಳು :** 100 ಮೈಕ್ರಾನ್‌ಗಿಂತ ಕಡಿಮೆ ದಪ್ಪದ ಪ್ಲಾಸ್ಟಿಕ್ ಅಥವಾ ಪಿ.ವಿ.ಸಿ. ಬ್ಯಾನರ್‌ಗಳು, ಪ್ಲಾಸ್ಟಿಕ್ ಸ್ಟಿರರ್‌ಗಳು.

### ಪ್ಲಾಸ್ಟಿಕ್ ಕಡ್ಡಿಗಳು, ಪ್ಲೇಟ್‌ಗಳು, ಪ್ಯಾಕಿಂಗ್ ಪ್ಲಾಸ್ಟಿಕ್ ಮೇಲೆ ನಿಷೇಧ

ಶಾಪಿಂಗ್ ಕೇಂದ್ರಗಳು, ಸಿನಿಮಾ ಮನೆಗಳು, ಪ್ರವಾಸೋದ್ಯಮ ಸ್ಥಳಗಳು, ಶಾಲೆಗಳು, ಕಾಲೇಜುಗಳು, ಕಚೇರಿ ಸಂಕೀರ್ಣಗಳು, ಆಸ್ಪತ್ರೆಗಳು, ಇತರೆ ಸಂಸ್ಥೆಗಳು ಮತ್ತು ಸಾಮಾನ್ಯ ಸಾರ್ವಜನಿಕರು ಹಲವಾರು ವಿಧದ ಏಕ ಬಳಕೆಯ ಪ್ಲಾಸ್ಟಿಕ್ ಉತ್ಪಾದನೆ, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ನಿಲ್ಲಿಸಬೇಕಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಮಾಲಿನ್ಯ ನಿಯಂತ್ರಣ ಮಂಡಳಿಯ ಜಿಲ್ಲಾ ಪರಿಸರ ಅಧಿಕಾರಿ ಮಂಜಪ್ಪ, ಜೂನ್ 30, 2022 ರೊಳಗೆ ಏಕಬಳಕೆಯ ಪ್ಲಾಸ್ಟಿಕ್ (ಎಸ್.ಯು.ಪಿ.) ವಸ್ತುಗಳ ಶೂನ್ಯ ದಾಸ್ತಾನುಗಳನ್ನು ಖಚಿತಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಬೇಕು. ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳ ಮಾರಾಟವಷ್ಟೇ ಅಲ್ಲದೇ, ಪ್ರದರ್ಶನ ಹಾಗೂ ಜಾಹೀರಾತುಗಳನ್ನು ಕೂಡ ಜುಲೈ 1ರಿಂದ ನಿಷೇಧಿಸಲಾಗುವುದು ಎಂದಿದ್ದಾರೆ.

ಸರ್ಕಾರದ ಆದೇಶ ಉಲ್ಲಂಘಿಸುವ ಕೈಗಾರಿಕೆಗಳಿಂದ ಹಿಡಿದು ಮಾರಾಟ ಕೇಂದ್ರಗಳು, ಸಿನೆಮಾ, ಶಾಲಾ - ಕಾಲೇಜು, ಕಚೇರಿ, ಆಸ್ಪತ್ರೆ ಸೇರಿದಂತೆ ಎಲ್ಲ ಸಂಸ್ಥೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ಅಂತಹ ಕೈಗಾರಿಕೆಗಳನ್ನು ಮುಚ್ಚುವ ಜೊತೆಗೆ ಪ್ರತಿ ಟನ್‌ಗೆ 5,000 ರೂ.ಗಳ ದಂಡ ವಿಧಿಸಲಾಗುವುದು ಎಂದವರು ಹೇಳಿದ್ದಾರೆ.

**ನಿಷೇಧದ ಅಗತ್ಯ :** ದೇಶದಲ್ಲಿ ಪ್ರತಿದಿನ 25,940 ಟನ್ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಈ ಪೈಕಿ ಶೇ.40ರಷ್ಟು ತ್ಯಾಜ್ಯ ಸಂಗ್ರಹವಾಗುತ್ತಿಲ್ಲ. ಪ್ರತಿದಿನ 10,376 ಟನ್ ಪ್ಲಾಸ್ಟಿಕ್ ಕಸ ವಿಲೇವಾರಿಯಾಗದೇ ಪರಿಸರ ಹಾನಿ ಮಾಡುತ್ತಿದೆ. ಈ ರೀತಿಯ ಪ್ಲಾಸ್ಟಿಕ್ ತ್ಯಾಜ್ಯ ಪರಿಸರಕ್ಕಷ್ಟೇ ಅಲ್ಲದೇ ಆರೋಗ್ಯಕ್ಕೂ ಅಪಾಯಕರ.

**ದಂಡ, ಜೈಲು :** ಏಕಬಳಕೆ ಪ್ಲಾಸ್ಟಿಕ್‌ಗಳ ಅಕ್ರಮ ಉತ್ಪಾದನೆ ಹಾಗೂ ಅದರ ಪೂರೈಕೆಯು ಪರಿಸರ ಸಂರಕ್ಷಣೆ ಕಾಯ್ದೆ, 1986ರ ಉಲ್ಲಂಘನೆಯಾಗಿದೆ. ಇದಕ್ಕಾಗಿ ದೋಷಿಗಳಿಗೆ ಗರಿಷ್ಠ ಐದು ವರ್ಷಗಳ ಜೈಲು ಹಾಗೂ 1 ಲಕ್ಷ ರೂ.ಗಳವರೆಗೂ ದಂಡಕ್ಕೆ ಅವಕಾಶವಿದೆ.

> ಜೂನ್ 30, 2022 ರೊಳಗೆ ಏಕಬಳಕೆಯ ಪ್ಲಾಸ್ಟಿಕ್ (ಎಸ್.ಯು.ಪಿ.) ವಸ್ತುಗಳ ಶೂನ್ಯ ದಾಸ್ತಾನುಗಳನ್ನು ಖಚಿತಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಬೇಕು. ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳ ಮಾರಾಟವಷ್ಟೇ ಅಲ್ಲದೇ, ಪ್ರದರ್ಶನ ಹಾಗೂ ಜಾಹೀರಾತುಗಳನ್ನು ಕೂಡ ಜುಲೈ 1ರಿಂದ ನಿಷೇಧಿಸಲಾಗುವುದು.
>
> **- ಮಂಜಪ್ಪ, ಜಿಲ್ಲಾ ಪರಿಸರ ಅಧಿಕಾರಿ**

## ನಾಳೆ ಯಶವಂತ ರಾವ್ ಜನ್ಮದಿನ



ದಾವಣಗೆರೆ, ಜೂ.27- ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷರು ಹಾಗೂ ಹಿರಿಯ ಮುಖಂಡರಾದ ಯಶವಂತ್ ರಾವ್ ಜಾಧವ್ ಅವರ ಜನ್ಮ ದಿನವನ್ನು ನಾಡಿದ್ದು ದಿನಾಂಕ 29ರ ಬುಧವಾರ ಬೆಳಗ್ಗೆ 11ಕ್ಕೆ ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಅಂಬಾ ಭವಾನಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ.

ಯಶವಂತ್ ರಾವ್ ಜಾಧವ್ ಸ್ನೇಹ ಬಳಗದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಜಾಧವ್ ಅವರು ಕಳೆದ 35 ವರ್ಷಗಳಿಂದಲೂ ಬಿಜೆಪಿ ಪಕ್ಷದಲ್ಲಿ ನಿಷ್ಠಾವಂತ ಹಾಗೂ ಸಕ್ರಿಯ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ರಾಷ್ಟ್ರೀಯತೆ, ಹಿಂದುತ್ವದ ಆಧಾರದ ಮೇಲೆ ಹೋರಾಡಿದ ಜಾಧವ್ ಅವರ ಕೆಲಸಗಳು ಕಾರ್ಯಕರ್ತರಿಗೆ ಪ್ರೇರಣೆಯಾಗಿವೆ ಎಂದು ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅಂದು ಜರುಗುವ ಕಾರ್ಯಕ್ರಮಕ್ಕೆ ಸಂಸದ ಜಿ.ಎಂ.ಸಿದ್ದೇಶ್ವರ, ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಶಾಸಕರುಗಳಾದ ಎಸ್.ಎ.ರವೀಂದ್ರನಾಥ್, ಎಂ.ಪಿ.ರೇಣುಕಾಚಾರ್ಯ, ಎಸ್.ವಿ.ರಾಮಚಂದ್ರಪ್ಪ, ಮಾಡಾಳು ವಿರುಪಾಕ್ಷಪ್ಪ, ಪ್ರೊ. ಲಿಂಗಣ್ಣ ಮತ್ತಿತರರು ಆಗಮಿಸಲಿದ್ದಾರೆ.

ಸ್ನೇಹ ಬಳಗದಿಂದ ನಾಳೆ ರಕ್ತದಾನ ಶಿಬಿರ, ಸೇವಾ ಕಾರ್ಯಕ್ರಮ, ಗೋಶಾಲೆಯಲ್ಲಿ ಗೋವುಗಳಿಗೆ ಮೇವು ವಿತರಣೆ ಮಾಡಲಾಗುವುದು. ಇದಲ್ಲದೇ, ಶಿವಾಜಿನಗರದಲ್ಲಿ ಇದೇ ದಿನಾಂಕ 30ರಂದು ಸಂಜೆ 7 ಗಂಟೆಗೆ ನಾಟಕ ಪ್ರದರ್ಶನ ನಡೆಯಲಿದೆ ಎಂದು ಅವರು ವಿವರಿಸಿದರು.

ಉಪಮೇಯರ್ ಗಾಯತ್ರಿ ಖಂಡೋಜಿರಾವ್, ಪಾಲಿಕೆ ಸದಸ್ಯರಾದ ಶಾಂತಕುಮಾರ್ ಸೋಗಿ, ಎಲ್.ಡಿ.ಗೋಣೆಪ್ಪ, ಗೋಪಾಲ್ ರಾವ್ ಮಾನೆ, ನರೇಂದ್ರ, ಟಿಂಕರ್ ಮಂಜಣ್ಣ, ನೀಲಗುಂದ ರಾಜು, ಪಿ.ಸಿ.ಶ್ರೀನಿವಾಸ್, ಆನಂದ್ ಹಿರೇಮಠ್ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಯುವಕರನ್ನು ಬೀದಿ ಪಾಲು ಮಾಡಲು ಹೊರಟಿರುವ ಬಿಜೆಪಿ

ದಾವಣಗೆರೆ, ಜೂ.27- ಅಗ್ನಿಪಥ್ ಯೋಜನೆ ಹೆಸರಿನಲ್ಲಿ ದೇಶದ ಯುವಕರನ್ನು ನಿರುದ್ಯೋಗಿಗಳನ್ನಾಗಿಸುತ್ತಿರುವುದಾಗಿ ಆರೋಪಿಸಿ ನಗರದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ಎಸ್. ನಿಜಲಿಂಗಪ್ಪ ಬಡಾವಣೆಯ ಅಮರ್ ಜವಾನ್ ಉದ್ಯಾನವನದ ಮುಂದೆ ಜಮಾಯಿಸಿದ್ದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಕೇಂದ್ರದ ಕ್ರಮವನ್ನು ಖಂಡಿಸಿದರು. ಯುವಕರನ್ನು ತಾತ್ಕಾಲಿಕವಾಗಿ ದುಡಿಸಿಕೊಂಡು ಶಾಶ್ವತವಾಗಿ ನಿರುದ್ಯೋಗಿಗಳನ್ನಾಗಿ ಮಾಡಲು ಹೊರಟಿದೆ. ಈ ಹಿಟ್ಲರ್ ನೀತಿಯ ಯೋಜನೆಯನ್ನು ಕೈಬಿಡುವಂತೆ ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಆಸಗೋಡು ಜಯಸಿಂಹ, ಕೇವಲ 4 ವರ್ಷಗಳ ಉದ್ಯೋಗ ನೀಡುವ ಮೂಲಕ ಯುವಕರ ಭಾವನೆಯನ್ನು ವ್ಯಂಗ್ಯ ಮಾಡುತ್ತಿದೆ. ನಂತರ ಅವರನ್ನು ಬೀದಿಪಾಲು ಮಾಡಲು ಕೇಂದ್ರವು ಹೊರಟಿದೆ. ಈ ಕುರಿತು ಇಡೀ ದೇಶದಲ್ಲಿ ಪ್ರತಿಭಟನೆ ನಡೆಯುತ್ತಿದ್ದರೂ ಸಹ ದೇಶದ ಪ್ರಧಾನ ಮಂತ್ರಿಗಳು ಯಾವುದೇ ಸ್ಪಷ್ಟನೆ ನೀಡುತ್ತಿಲ್ಲ. ಜನವಿರೋಧಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಆಕ್ರೋಶ, ಪ್ರತಿಭಟನೆ

ಯುವಕರ ಭವಿಷ್ಯವನ್ನು ಕೇಂದ್ರ ಹಾಳು ಮಾಡುತ್ತಿದೆ. 16ರಿಂದ 21ರ ವಯಸ್ಸಿನಲ್ಲಿ ಮಕ್ಕಳು ವಿದ್ಯಾಭ್ಯಾಸ ಮಾಡುವ ಕಾಲ. ಯುವಪೀಳಿಗೆ ದೇಶದ ಆಸ್ತಿ, ಅಲ್ಲದೇ ಸೇನೆ ಸೇರಲು ದೇಶವನ್ನು ಶಕ್ತಿಯುತವಾಗಿ ಮಾಡಬೇಕು. ಇದಕ್ಕಾಗಿ ಜೀವನ ಮುಡಿಪಾಗಿ ಇಡುತ್ತಾರೆ. ಆದರೆ ಕೇಂದ್ರವು ಕೇವಲ 4 ವರ್ಷಗಳ ಸೇನೆ ಸೇವೆ ಪಡೆದು ಅವರ ಜೀವನ ಹಾಳು ಮಾಡಲು ಕೇಂದ್ರವು ಹೊರಟಿದೆ. 35 ಸಾವಿರ ನೇಮಕಾತಿ ಮಾಡಲಾಗುತ್ತಿದೆ. ಅದರಿಂದ ಬರುವ ಸ್ವಲ್ಪ ಹಣ ಅವರ ಜೀವನಕ್ಕೆ ಸಾಕಾಗುವುದಿಲ್ಲ. ಯುವಕರು ಮೋದಿಗೆ ಸಹಕಾರ ನೀಡಿ ಅತಂತ್ರರಾಗಿದ್ದಾರೆ ಎಂದು ಆಕ್ಷೇಪಿಸಿದರು.

ಈಗಲೂ ಕಾಲ ಮಿಂಚಿಲ್ಲ. ದೇಶದ ಯುವಕರ ಬಗ್ಗೆ ಪ್ರಧಾನಿಗಳು ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಸೇನಾ ಆಡಳಿತದಲ್ಲಿ ಯಾವುದೇ ಸರ್ಕಾರಗಳಾಗಲೀ ಹಸ್ತಕ್ಷೇಪ ಮಾಡಬಾರದು. ಆಡಳಿತದಲ್ಲಿ ರಾಜೀ ಆಗಬಾರದು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಗಡಿಗುಡಾಳು ಮಂಜುನಾಥ್, ಮುಖಂಡರುಗಳಾದ ಎ. ನಾಗರಾಜ್, ಕೆ.ಜಿ. ಶಿವಕುಮಾರ್, ಮುದೇಗೌಡ್ರ ಗಿರೀಶ್, ಎಸ್.ಮಲ್ಲಿಕಾರ್ಜುನ್, ರಮೇಶ್, ಡೋಲಿ ಚಂದ್ರು, ಮೈನುದ್ದೀನ್ ಸೇರಿದಂತೆ ಇತರರು ಇದ್ದರು.

## ಯಲವಟ್ಟಿ : ಇಂದು ಸಂಗೀತೋತ್ಸವ

ಮಲೇಬೆನ್ನೂರು ಸಮೀಪದ ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮದಲ್ಲಿ ಇಂದು ಸಂಜೆ 6 ಗಂಟೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದಾವಣಗೆರೆ ಇವರಿಂದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಸಂಗೀತೋತ್ಸವ ಕಾರ್ಯಕ್ರಮವನ್ನು ಶ್ರೀ ಯೋಗಾನಂದ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ. ಇದೇ ಸಂದರ್ಭದಲ್ಲಿ ಅಮವಾಸ್ಯೆ ಸತ್ಸಂಗ ಕಾರ್ಯಕ್ರಮ ಜರುಗಲಿದ್ದು, ಗ್ರಾಮದ ಹಿರಿಯರಾದ ಬಿ. ಜಿ.ಮುರಿಗೆಪ್ಪ ಗೌಡ್ರು ಅವರು ತಮ್ಮ 99ನೇ ಹುಟ್ಟು ಹಬ್ಬದ ಅಂಗವಾಗಿ ದಾಸೋಹ ವ್ಯವಸ್ಥೆ ಏರ್ಪಡಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಮುಖ್ಯಅತಿಥಿಯಾಗಿ ಭಾಗವಹಿಸಲಿದ್ದಾರೆ.

## ನಗರದಲ್ಲಿ ಇಂದು ಸಿಜಿಕೆ ಬೀದಿ ರಂಗ ದಿನಾಚರಣೆ, ರಂಗ ಕಾರ್ಯಾಗಾರ

ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಸಿ.ಜಿ.ಕೆ. ಬೀದಿ ರಂಗ ದಿನಾಚರಣೆ, ರಂಗ ಕಾರ್ಯಾಗಾರ ಹಾಗೂ ಗ್ರಾಮೀಣ ಕಲಾವಿದರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಪಾಂಡೋಮಟ್ಟಿ-ಕಮ್ಮತ್ತಹಳ್ಳಿ ವಿರಕ್ತಮಠದ ಶ್ರೀ ಗುರುಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸಂಘದ ಅಧ್ಯಕ್ಷ ಎನ್.ಎಸ್. ರಾಜು ತಿಳಿಸಿದ್ದಾರೆ.

ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ್ ಕುರ್ಕಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಬಿ.ಟಿ. ಕುಮಾರಸ್ವಾಮಿ, ಬಿ. ದೇವೇಂದ್ರಪ್ಪ ಚಿಕ್ಕಮ್ಮನಹಟ್ಟಿ, ರವಿಚಂದ್ರ, ಪ್ರೊ. ಹೆಚ್. ಚನ್ನಪ್ಪ, ಕೆ.ಬಿ. ಪರಮೇಶ್ವರಪ್ಪ, ಎಂ. ಪರಮೇಶ್ವರಪ್ಪ ಭಾಗವಹಿಸಲಿದ್ದಾರೆ.

ಮಾರ್ತಾಂಡಪ್ಪ ಅವರಿಗೆ 'ಸಿಜಿಕೆ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶೀಘ್ರಲಿಪಿಗಾರರಾದ ಹೆಚ್.ಆರ್. ಲಕ್ಷ್ಮಿದೇವಿ, ವಾರ್ತಾ ಇಲಾಖೆ ಬಿ.ಎಸ್. ಬಸವರಾಜ್ ಅವರಿಗೆ 'ಜಿಲ್ಲಾ ಸರ್ವೋತ್ತಮ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದರೊಟ್ಟಿಗೆ ಆಯ್ದ ಕಲಾವಿದರನ್ನು ಪುರಸ್ಕರಿಸಲಾಗುವುದು ಎಂದು ರಾಜು ಹೇಳಿದ್ದಾರೆ.

## ನಗರದಲ್ಲಿ ಇಂದು ಶಿವಾನುಭವ ಸಂಪದ

ಶ್ರೀ ಅನ್ನದಾನೀಶ್ವರ ಶಾಖಾಮಠದ ಆಶ್ರಯದಲ್ಲಿ ಇಂದು ಸಂಜೆ 6.30 ಕ್ಕೆ ಶಿವಾನುಭವ ಸಂಪದ ಕಾರ್ಯಕ್ರಮ ನಡೆಯಲಿದೆ. ದಿವ್ಯಸಾನ್ನಿಧ್ಯವನ್ನು ಹಾಲಕೆರೆ ಸಂಸ್ಥಾನ ಮಠದ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ, ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್. ವೀರಣ್ಣ ವಹಿಸುವರು. ಮುಖ್ಯ ಅತಿಥಿಯಾಗಿ ಕೆ.ಎಂ. ಸುರೇಶ್ ಆಗಮಿಸುವರು. ಕಾರ್ಯಕ್ರಮದಲ್ಲಿ ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರರಾದ ಟಿ.ಎಂ. ಚಂದ್ರಶೇಖರಪ್ಪ, ಶ್ರೀಮತಿ ಸುಶೀಲಮ್ಮ ಚಂದ್ರಶೇಖರಪ್ಪ ಅವರುಗಳಿಗೆ ಸನ್ಮಾನಿಸಲಾಗುವುದು. ಭಕ್ತಿ ಸೇವೆಯನ್ನು ಲಿಂ. ಶ್ರೀಮತಿ ತಿಪ್ಪಮ್ಮ ಲಿಂ. ಯಜಮಾನ್ ಟಿ. ಜಯದೇವಪ್ಪ ಇವರ ಸ್ಮರಣಾರ್ಥ ಅವರ ಕುಟುಂಬ ವರ್ಗದವರು ನಡೆಸಿಕೊಡುವರು. ಸಂಗೀತ ಸೇವೆಯನ್ನು ಹೆಚ್.ಎಂ. ಕುಮಾರಸ್ವಾಮಿ ನಡೆಸಿ ಕೊಡುವರು. ಪರಶುರಾಮ ಎಸ್. ಶಾನವಾಡ ತಬಲಾ ಸೇವೆ ಸಲ್ಲಿಸುವರು.

## ಜಿ7 ದೇಶಗಳಿಂದ ಮೂಲಭೂತ ಸೌಲಭ್ಯಕ್ಕೆ 600 ಶತಕೋಟಿ ಡಾಲರ್ ಯೋಜನೆ

ಎಲ್ಮಾ (ಜರ್ಮನಿ), ಜೂ. 27 – ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೂಲಭೂತ ಸೌಲಭ್ಯ ಯೋಜನೆಗಳಿಗೆ ನೆರವಾಗಲು 600 ಶತಕೋಟಿ ಡಾಲರ್‌ಗಳ ಯೋಜನೆಯನ್ನು 2027ರ ಒಳಗೆ ಜಾರಿಗೆ ತರಲು ಜಿ7 ದೇಶಗಳ ನಾಯಕರು ನಿರ್ಧರಿಸಿದ್ದಾರೆ.

ಜಿ7 ಶೃಂಗಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ಚೀನಾದ ಬೆಲ್ಟ್ ಅಂಡ್ ರೋಡ್ ಯೋಜನೆಗೆ ಜಿ7 ದೇಶಗಳ ಯೋಜನೆ ಸ್ಪರ್ಧಿಯಾಗಲಿದೆ.

## ಗಂಗನರಸಿ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠದಲ್ಲಿಂದು ವಿಶೇಷ ಪೂಜೆ

ಹರಿಹರ ತಾಲ್ಲೂಕಿನ ಗಂಗನರಸಿ ಗ್ರಾಮದ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠದಲ್ಲಿ ಇಂದು ಮಣ್ಣೆತ್ತಿನ ಅಮಾವಾಸ್ಯೆ ವಿಶೇಷ ಪೂಜೆ ನಡೆಯಲಿದೆ. ಬೆಳಿಗ್ಗೆ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಮಠ ಹಾಗೂ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿಯ ಆಶ್ರಯದಲ್ಲಿ ಗಂಗನರಸಿ ಗ್ರಾಮದ ಹೊರಮಠದಲ್ಲಿರುವ ಶ್ರೀ ಗೋಣಿ ಬಸವೇಶ್ವರ ಹಾಗೂ ನಾಗದೇವತಾ ಸ್ವಾಮಿಗಳಿಗೆ ಅಮಾವಾಸ್ಯೆ, ಅಭಿಷೇಕ ಮತ್ತು ಮಹಾಮಂಗಳಾರತಿ ನಡೆಯುವುದು. ನಂತರ 11.30 ಕ್ಕೆ ಶ್ರೀಮತಿ ಭಾರತಿ ಕೋಂ ಕೆ. ಸತ್ಯನಾರಾಯಣ, ಮಾರುತಿ ಬಡಾವಣೆ, ಹುಣಸೂರು (ಮೈಸೂರು ಜಿಲ್ಲೆ) ಇವರಿಂದ ಮಹಾ ಪ್ರಸಾದ ವ್ಯವಸ್ಥೆ ನಡೆಯುವುದು ಎಂದು ಅಧ್ಯಕ್ಷ ಜಿ.ಎಂ. ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.


## ಹರಿಹರ ತಾ.ರೈತರ ತಿರಸ್ಕೃತ ಬೆಳೆ ವಿಮೆ ಇತ್ಯರ್ಥ ಪಡಿಸಲು ಇಲಾಖೆ ಕ್ರಮ


ಹರಿಹರ, ಜೂ.27 - 2019-20ನೇ ಸಾಲಿನ ಮುಂಗಾರು ಹಾಗು ಬೇಸಿಗೆ ಹಂಗಾಮಿನಲ್ಲಿ ತಿರಸ್ಕೃತಗೊಂಡಿರುವ ಬೆಳೆ ವಿಮೆ ಪ್ರಸ್ತಾವನೆಗಳನ್ನು ಇತ್ಯರ್ಥ ಪಡಿಸಲು ಕೇಂದ್ರ ಸರ್ಕಾರದ ಮಾರ್ಗದರ್ಶನದಂತೆ ಇಲ್ಲಿನ ಕೃಷಿ ಇಲಾಖೆ ಮುಂದಾಗಿದೆ. ಬೆಳೆ ಸಮೀಕ್ಷೆಯ ದತ್ತಾಂಶಗಳನ್ನು ಬೆಳೆ ವಿಮೆ ನೋಂದಣಿಯಾದ ಪ್ರಸ್ತಾವನೆಯೊಂದಿಗೆ ಹೋಲಿಕೆ ಮಾಡಿದಾಗ ತಾಳೆಯಾಗಿರುವುದಿಲ್ಲ. ಹರಿಹರ ತಾಲ್ಲೂಕಿನಲ್ಲಿ ಮುಂಗಾರು ಹಂಗಾಮಿನಲ್ಲಿ 401 ಮತ್ತು ಬೇಸಿಗೆ ಹಂಗಾಮಿನಲ್ಲಿ 22 ತಿರಸ್ಕೃತಗೊಂಡಿರುತ್ತವೆ. ತಿರಸ್ಕೃತಗೊಂಡ ರೈತರು ದಾಖಲಾತಿಗಳನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸಿದಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ತ್ರೈಮಾಸಿಕ ಕೆಡಿಪಿ ಸಭೆ ಮುಂದೂಡಿಕೆ

ದಾವಣಗೆರೆ, ಜೂ. 27- ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮದ ಗ್ರಾಮ ಪಂಚಾಯತಿ ಆವರಣದಲ್ಲಿ ಅಧ್ಯಕ್ಷ ಎಸ್. ಗುತ್ಯಪ್ಪ ಅವರ ಅಧ್ಯಕ್ಷತೆಯಲ್ಲಿ ಸೋಮವಾರ (ಜೂ. 27) ನಡೆಯಬೇಕಿದ್ದ ತ್ರೈಮಾಸಿಕ ಕೆಡಿಪಿ ಸಭೆಯನ್ನು ವಿವಿಧ ಇಲಾಖೆ ಅಧಿಕಾರಿಗಳು ಹಾಜರಾಗದ ಕಾರಣ ಜುಲೈ 11 ಕ್ಕೆ ಮುಂದೂಡಲಾಗಿದೆ.

# ನವೀಕೃತ ರೂಪದಲ್ಲಿ ಶತಮಾನ ತುಂಬಿದ ಬಾಲಕರ ಸರ್ಕಾರಿ ಪ್ರೌಢಶಾಲೆ





ದೇವನಗರಿಯ ಮುಕುಟಮಣಿಯಂತಿರುವ, ಶತಮಾನ ದಾಟಿದ ಬಾಲಕರ ಸರ್ಕಾರಿ ಪ್ರೌಢಶಾಲೆ 1922 ಆಗಸ್ಟ್ 30 ರಂದು ಅಂದಿನ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಎ.ಆರ್. ಬ್ಯಾನರ್ಜಿ ಅವರ ಅಮೃತ ಹಸ್ತದಿಂದ ಉದ್ಘಾಟನೆಗೊಂಡಿತ್ತು.

ಖಾಸಗಿ ಶಾಲೆಗಳ ಹಾವಳಿ ಹೆಚ್ಚಾಗುವ ದಕ್ಕಿಂತ ಮೊದಲು ಪ್ರತಿ ವರ್ಷ ಎರಡು ಸಾವಿರ ವಿದ್ಯಾರ್ಥಿಗಳು ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಪ್ರತಿ ಶನಿವಾರ ಹೈಸ್ಕೂಲ್ ಮೈದಾನದಲ್ಲಿ ನಡೆಯುತ್ತಿದ್ದ ಡ್ರಿಲ್ (ದೈಹಿಕ ಕಸರತ್ತು) ನೋಡುಗರ ಕಣ್ಣಿಗೆ ಹಬ್ಬವಾಗಿತ್ತು. ಎಲ್ಲಾ ವಿದ್ಯಾರ್ಥಿಗಳು ಬಿಳಿ ಸಮವಸ್ತ್ರ ಧರಿಸಿ, ಇಡೀ ಮೈದಾನದ ತುಂಬಾ ವಿದ್ಯಾರ್ಥಿಗಳ ಸಾಮೂಹಿಕ ಡ್ರಿಲ್ ನೋಡಲು ಜನ ಸೇರುತ್ತಿದ್ದರು.

ಈ ಮೈದಾನದಲ್ಲಿ ಭಾರತದ ಪ್ರಧಾನ ಮಂತ್ರಿಗಳು, ಕರ್ನಾಟಕದ ಮುಖ್ಯಮಂತ್ರಿಗಳು, ಮಂತ್ರಿ ಮಹೋದಯರು, ಚಿತ್ರನಟ, ನಟಿಯರು, ಹೆಸರಾಂತ ಸಮಾಜ ಸೇವಕರು ಅನೇಕ ಸಂದರ್ಭಗಳಲ್ಲಿ ತಮ್ಮ ಭಾಷಣಗಳನ್ನು ಮಾಡಿರುವುದನ್ನು ಇಲ್ಲಿ ಸ್ಮರಿಸಬಹುದು.


ಬಾಲಕರ ಸರ್ಕಾರಿ ಪ್ರೌಢಶಾಲೆಯಲ್ಲಿ ಕಲಿತ ಅನೇಕ ವಿದ್ಯಾರ್ಥಿಗಳು ರಾಷ್ಟ್ರ ಮತ್ತು ರಾಜ್ಯಗಳ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಅನೇಕ ವಿದ್ಯಾರ್ಥಿಗಳು ತಾವು ಕಲಿತ ಶಾಲೆಯನ್ನು ತಮ್ಮ ಮಕ್ಕಳು, ಮೊಮ್ಮಕ್ಕಳೊಂದಿಗೆ ಬಂದು ಕಟ್ಟಡದ ಮುಂದೆ ನಿಂತು ಸೆಲ್ಫಿ ತೆಗೆಸಿಕೊಂಡು ಬಾಲ್ಯದ ನೆನಪುಗಳನ್ನು ಮೆಲುಕು ಹಾಕುವುದು ಸಾಮಾನ್ಯವಾಗಿದೆ.

ಬಹಳ ದಿನಗಳ ಕಾಲ ದುರಸ್ತಿ ಕಾಣದೆ ಹೆಂಚುಗಳೆಲ್ಲಾ ಒಡೆದು, ಮಳೆ ಬಂದರೆ ಸೋರುವಂತಾಗಿತ್ತು. ಪಾರಂಪರಿಕ ಕಟ್ಟಡ ಇದಾಗಿದ್ದರಿಂದ ಯಥಾಸ್ಥಿತಿ ಕಾಪಾಡಿಕೊಂಡು ಬಂದು ಮಧ್ಯ ಭಾಗದಲ್ಲಿ ಖಾಲಿ ಇದ್ದ ಜಾಗದಲ್ಲಿ ಅಂದು ಸಚಿವರಾಗಿದ್ದ, ಹಾಲಿ ಉತ್ತರ ವಿಧಾನ ಸಭಾ ಕ್ಷೇತ್ರದ ಶಾಸಕ ಎಸ್.ಎ. ರವೀಂದ್ರನಾಥ್ ಅವರು ತಮ್ಮ ಹಾಗೂ ಸರ್ಕಾರದ ಹೆಚ್ಚುವರಿ ಅನುದಾನದಲ್ಲಿ ಮೂರು ಅಂತಸ್ತುಗಳುಳ್ಳ ಎರಡು ಹೊಸ ಬೃಹದಾಕಾರದ ಕಟ್ಟಡ ನಿರ್ಮಿಸಿ, ಹೈಸ್ಕೂಲ್ ಮತ್ತು ಪದವಿ ಪೂರ್ವ ಕಾಲೇಜು ನಡೆಸಲು ಅನುಕೂಲ ಮಾಡಿಕೊಟ್ಟಿದ್ದಾರೆ.

ಈ ಎರಡು ಕಟ್ಟಡಗಳಿಗೆ ಸಂಸದ ಜಿ.ಎಂ. ಸಿದ್ದೇಶ್ವರ ತಮ್ಮ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಅನುದಾನ ನೀಡಿದ್ದಾರೆ. ಡಾ. ಎ. ಹೆಚ್. ಶಿವಯೋಗಿ ಸ್ವಾಮಿ ವಿಧಾನ ಪರಿಷತ್ ಸದಸ್ಯರಾಗಿದ್ದಾಗ ತಮ್ಮ ಅನುದಾನ ನೀಡಿ ಕಾಲೇಜು ಅಭಿವೃದ್ಧಿಗೆ ಶ್ರಮಿಸಿದ್ದಾರೆ.

ಹಳೆಯ ಕಟ್ಟಡ ನಿರ್ವಹಣೆ ಇಲ್ಲದೇ ದುಸ್ಥಿತಿಯಲ್ಲಿ ಇದ್ದದ್ದನ್ನು ಮನಗಂಡ ಶಾಸಕ ರವೀಂದ್ರನಾಥ್ ಅವರು, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಮೇಲೆ ಮತ್ತು ಸಂಸದ ಸಿದ್ದೇಶ್ವರ ಅವರ ಸಹಕಾರದೊಂದಿಗೆ ಸ್ಮಾರ್ಟ್ ಸಿಟಿ ಯೋಜನೆಯಡಿ ಸುಮಾರು 2 ಕೋಟಿ ರೂ. ಗಳ ವೆಚ್ಚದಲ್ಲಿ ಪಾರಂಪರಿಕ ಕಟ್ಟಡಕ್ಕೆ ಧಕ್ಕೆಯಾಗದಂತೆ ನವೀಕರಣಗೊಳಿಸಿದ್ದಾರೆ. ಇದರೊಟ್ಟಿಗೆ ಶುದ್ಧ ಕುಡಿಯುವ ನೀರು, ವಿದ್ಯುತ್ ಉಪಕರಣಗಳನ್ನು ಅಳವಡಿಸಿ ನವ ವಧುವಿನಂತೆ ಸಿಂಗರಿಸಲಾಗಿದೆ.

ಇದೀಗ ಹೈಸ್ಕೂಲ್ ಆಧುನಿಕತೆಗೆ ತಕ್ಕಂತೆ ಅಭಿವೃದ್ಧಿ ಜೊತೆಗೆ ಸ್ಮಾರ್ಟ್ ಆಗಿದೆ. ನಾಳೆ ದಿನಾಂಕ 29 ರ ಬುಧವಾರ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರಿಂದ ನವೀಕೃತ ಕಟ್ಟಡ ಉದ್ಘಾಟನೆಯಾಗಲಿದೆ.



**- ಕೆ.ಎಸ್. ಹನುಮಂತಪ್ಪ,**
ವಕೀಲರು,
ಉಪಾಧ್ಯಕ್ಷರು ಕಾಲೇಜು ಅಭಿವೃದ್ಧಿ ಮಂಡಳಿ ದಾವಣಗೆರೆ.

## ಎವಿಕೆ ಕಾಲೇಜಿನಲ್ಲಿ ಇಂದು ಐಕ್ಯೂಎಸಿಯ ಪ್ರೇರಣೆ ದಿನಾಚರಣೆ

ನಗರದ ಎ.ವಿ.ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ಕಾಲೇಜಿನ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಭಾ ಭವನದಲ್ಲಿ ಐಕ್ಯೂಎಸಿ ಕಾರ್ಯಕ್ರಮದಡಿ ಪ್ರೇರಣ ಭಾಷಣ ನಡೆಯುವುದು. ಆಲ್ ಇಂಡಿಯಾ ಯುಪಿಎಸ್‌ಸಿ 31ನೇ ರ್‍ಯಾಂಕ್ ಪಡೆದ ಅವಿನಾಶ್ ಅವರು ಪ್ರೇರಣಾ ಭಾಷಣ ನಡೆಸಿಕೊಡುವರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ಬಿ.ಪಿ. ಕುಮಾರ್ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಎಂ.ಜಿ. ಈಶ್ವರಪ್ಪ ಆಗಮಿಸುವರು.

# ಸೈಕಲ್ ರೈಡ್ ಚಾಲೆಂಜರ್ಸ್ ಸ್ಪೋರ್ಟ್ಸ್ ಕ್ಲಬ್‌ನ ಕ್ರೀಡಾಪಟುಗಳಿಗೆ ನಗರಕ್ಕೆ ಸ್ವಾಗತ






ದಾವಣಗೆರೆ, ಜೂ.27- ಸೈಕಲ್ ರೈಡ್ ಚಾಲೆಂಜರ್ಸ್ ಸ್ಪೋರ್ಟ್ಸ್ ಕ್ಲಬ್ ತಂಡ ಚಿತ್ರದುರ್ಗದಿಂದ ರಾಣೇಬೆನ್ನೂರಿಗೆ 100 ಕಿ.ಮೀ. ಸೈಕಲ್ ರೈಡ್ ಮಾಡುತ್ತಿರುವ ಕ್ರೀಡಾ ಪಟುಗಳಿಗೆ ಸೈಕಲ್ ರೈಡ್ ಸ್ಪರ್ಧೆಯಲ್ಲಿ ನಗರದ ಮುಖಾಂತರ ಪ್ರಯಾಣ ಬೆಳೆಸುತ್ತಿರುವಾಗ ಕಾಂಗ್ರೆಸ್ ಮುಖಂಡ ನಿಟುವಳ್ಳಿಯ ಎಸ್. ಪ್ರವೀಣ್ ಕುಮಾರ್ ಅವರು ನಿನ್ನೆ ಸ್ವಾಗತಿಸಿದರು.

ಚಾಲೆಂಜರ್ಸ್ ಸ್ಪೋರ್ಟ್ಸ್ ಕ್ಲಬ್ ಚಿತ್ರದುರ್ಗ ಆಶ್ರಯದಲ್ಲಿ ಚಿತ್ರದುರ್ಗದಿಂದ ರಾಣೇಬೆನ್ನೂರಿಗೆ 100 ಕಿ.ಮೀ. ಸೈಕಲ್ ರೈಡ್ ಹೊರಟಿರುವ ಕ್ರೀಡಾ ಪಟುಗಳಿಗೆ ಸ್ವಾಗತಿಸಿ, ಜ್ಯೂಸ್ ಮತ್ತು ಗ್ಲೂಕೋಸ್ ವಿತರಿಸುವ ಮೂಲಕ ಸೈಕಲ್ ರೈಡ್ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿದರು.

ಈ ಸಂದರ್ಭದಲ್ಲಿ ಎ.ಆರ್. ಕೊಟ್ರೇಶ್, ಸಚಿನ್, ಪೃಥ್ವಿರಾಜ್, ಅರುಣ್‌ಕುಮಾರ್, ಸಂತೋಷ್, ಪ್ರಶಾಂತ್ ಉಪಸ್ಥಿತರಿದ್ದರು.

# ಜು.12ರಂದು ನಗರದಲ್ಲಿ ಜಯದೇವ ಜಗದ್ಗುರುಗಳ 65ನೇ ಸ್ಮರಣೋತ್ಸವಕ್ಕೆ ಸಿದ್ಧತೆ


ದಾವಣಗೆರೆ, ಜೂ.27- ಬಸವ ಕೇಂದ್ರ - ಶ್ರೀ ಶಿವಯೋಗಾಶ್ರಮ ಮುರುಘ ರಾಜೇಂದ್ರ ಟ್ರಸ್ಟ್, ವಿರಕ್ತ ಮಠ ಇವರ ಜಂಟಿ ಆಶ್ರಯದಲ್ಲಿ ಬರುವ ಜುಲೈ 12, 13 ಮತ್ತು 14ರಂದು ಹಿರಿಯ ಜಗದ್ಗುರು ಲಿಂಗೈಕ್ಯ ಶ್ರೀ ಜಯದೇವ ಮುರುಘರಾಜೇಂದ್ರ ಮಹಾ ಸ್ವಾಮಿಗಳವರ 65ನೇ ವರ್ಷದ ಸ್ಮರಣೋತ್ಸವ ನಡೆಯಲಿದೆ ಎಂದು ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ತಿಳಿಸಿದ್ದಾರೆ.


ಇದೇ ಸಂದರ್ಭದಲ್ಲಿ ಶರಣ ಸಂಸ್ಕೃತಿ ಉತ್ಸವ, ಶ್ರೀ ಅಥಣಿ ಮುರುಘೇಂದ್ರ ಶಿವಯೋಗಿಗಳ ಲಿಂಗೈಕ್ಯ ಶತಮಾನೋತ್ಸವ, ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರ ಶೂನ್ಯ ಪೀಠಾರೋಹಣದ ತೃತೀಯ ದಶಮಾನೋತ್ಸವ ಕಾರ್ಯಕ್ರಮವನ್ನು ನಗರದ ಶಿವಯೋಗಾಶ್ರಮದ ಆವರಣದಲ್ಲಿ ಆಚರಿಸಲು ತೀರ್ಮಾನಿಸಲಾಗಿದೆ.

ನಗರದ ಶ್ರೀ ಶಿವಯೋಗ ಮಂದಿರದಲ್ಲಿ ನಿನ್ನೆ ನಡೆದ ಪೂರ್ವಸಿದ್ಧತಾ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಈ ಕಾರ್ಯಕ್ರಮಗಳನ್ನು ಕಳೆದ ಜನವರಿಯಲ್ಲಿ ಆಚರಿಸಬೇಕಿತ್ತು. ಆದರೆ, ಕೋವಿಡ್ ನಿಯಮಾವಳಿಗಳಿಂದ ಈ ಬಾರಿ ಜುಲೈನಲ್ಲಿ ಆಚರಿಸುತ್ತಿದ್ದೇವೆ. ಭಕ್ತಾದಿಗಳು ಹೆಚ್ಚಿನ ಪ್ರಮಾಣದಲ್ಲಿ ಸೇವೆ ಸಲ್ಲಿಸಬೇಕು ಎಂದು ಕೇಳಿಕೊಂಡರು.

ಅಲ್ಲದೇ, ಸಮಾರಂಭದಲ್ಲಿ ನಾಡಿನ ಸಾಧಕರಿಗೆ 'ಜಯದೇವ ಶ್ರೀ' ಪ್ರಶಸ್ತಿ, 'ಶೂನ್ಯ ಪೀಠ' ಪ್ರಶಸ್ತಿಗಳನ್ನು ಡಾ. ಶಿವಮೂರ್ತಿ ಮುರುಘಾ ಶರಣರು ಪ್ರದಾನ ಮಾಡುವರು ಎಂದು ಸ್ವಾಮೀಜಿ ಹೇಳಿದರು.

**ಪ್ರವಚನ ಸಾಧಕರೊಂದಿಗೆ ಸಂವಾದ :** ಈ ಕಾರ್ಯಕ್ರಮದ ಅಂಗವಾಗಿ ಬರುವ ಜುಲೈ 7 ರವರೆಗೆ ಪ್ರತಿದಿನ ಸಂಜೆ 6 ಗಂಟೆಗೆ ವಿಶೇಷ ಪ್ರವಚನ, ಪ್ರತಿದಿನ ಮುಂಜಾನೆ ಸಹಜ ಶಿವಯೋಗ, ಮಕ್ಕಳೊಂದಿಗೆ, ಸಾಧಕರೊಂದಿಗೆ ಸಂವಾದ, ಉಪನ್ಯಾಸ ಕಾರ್ಯಕ್ರಮ. ಸಂಗೀತ ಕಾರ್ಯಕ್ರಮಗಳು, ಸಂಜೆ ಜಮುರಾ ನಾಟಕೋತ್ಸವ ಹಮ್ಮಿಕೊಳ್ಳ ಲಾಗುವುದು. ಉಚಿತ ಕಣ್ಣಿನ ಪರೀಕ್ಷೆ, ಆರೋಗ್ಯ ತಪಾಸಣಾ ಶಿಬಿರ, ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಅಥಣಿ ಶಿವಯೋಗಿಗಳವರು ಲಿಂಗೈಕ್ಯ ರಾಗಿ ನೂರು ವರ್ಷ ಪೂರ್ಣಗೊಂಡಿವೆ. ಹಾಗಾಗಿ ಅಥಣಿ ಶಿವಯೋಗಿಗಳವರ ಶತಮಾನೋತ್ಸವ ಆಚರಿಸಲಾಗುವುದು. ಪ್ರತಿದಿನ ಸಮಾರಂಭದ ಬಳಿಕ ಎಲ್ಲರಿಗೂ ದಾಸೋಹದ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.



ಸಭೆಯಲ್ಲಿ ಟ್ರಸ್ಟ್‌ನ ಕಾರ್ಯದರ್ಶಿ ಅಂದನೂರು ಮುಪ್ಪಣ್ಣ, ಜಗದ್ಗುರು ಶ್ರೀ ಜಯದೇವ ಪ್ರಸಾದ ನಿಲಯದ ಕಾರ್ಯದರ್ಶಿ ಎಂ. ಜಯಕುಮಾರ್, ಎಸ್. ಓಂಕಾರಪ್ಪ, ಎಂ.ಕೆ. ಬಕ್ಕಪ್ಪ, ಕಣಕುಪ್ಪಿ ಮುರುಗೇಶಪ್ಪ, ಟಿ.ಎಂ. ವೀರೇಂದ್ರ, ಹಾಸಬಾವಿ ಕರಿಬಸಪ್ಪ, ಲಂಬಿ ಮುರುಗೇಶಪ್ಪ, ಎಂ.ಎಸ್. ಶಿವಯೋಗಿ, ನವೀನ್ ಹಾಗೂ ಇತರರು ಇದ್ದರು.

## ಯಶವಂತರಾವ್‌ಗೆ ಶ್ರೀಗಳ ಆಶೀರ್ವಾದ



ದಾವಣಗೆರೆ, ಜೂ. 27 - ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರಸೋಮೇಶ್ವರ ಮಹಾಸ್ವಾಮೀಜಿಯವರು ನಗರದ ಶ್ರೀ ರೇಣುಕಾ ಮಂದಿರಕ್ಕೆ ಇಂದು ಆಗಮಿಸಿದ್ದ ಸಂದರ್ಭದಲ್ಲಿ ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಅವರು ಜಗದ್ಗುರುಗಳವರ ಆಶೀರ್ವಾದ ಪಡೆದರು.

ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಗೋಪಾಲ್ ರಾವ್ ಮಾನೆ, ಆನಂದ ಹಿರೇಮಠ, ಸೋಗಿ ಶಾಂತಕುಮಾರ್, ಟಿಂಕರ್ ಮಂಜಣ್ಣ, ಗುರುಶಾಂತ್ ಸೋಗಿ, ದೇವರಮನೆ ಸೂರಜ್, ದೇವರಮನೆ ಶಿವರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಅಮೇರಿಕಾದಲ್ಲಿ ಮುರುಘಾ ಶರಣರು



ಚಿತ್ರದುರ್ಗ, ಜೂ. 27 - ಅಮೆರಿಕಾದ ವಿ.ಎಸ್.ಎನ್.ಎ. ಸಂಘಟನೆ ಡಲ್ಲಾಸ್‌ನಲ್ಲಿ ಬರುವ ಜುಲೈ 1, 2 ಮತ್ತು 3ರಂದು ಆಯೋಜಿಸಿರುವ 45ನೇ ಶರಣ ಸಮನ್ವಯ ಸಮ್ಮೇಳನದಲ್ಲಿ ಭಾಗವಹಿಸಲು ಅಮೆರಿಕಾ ಪ್ರವಾಸ ಕೈಗೊಂಡಿರುವ ಡಾ. ಶಿವಮೂರ್ತಿ ಮುರುಘಾ ಶರಣರು, ಡಲ್ಲಾಸ್‌ನ ಡಾ. ಭರತ್‌ಕುಮಾರ್ ಅವರ ಮನೆಯಲ್ಲಿ ಇಂದು ಏರ್ಪಾಡಾಗಿದ್ದ ಶಿವಯೋಗ ಕಾರ್ಯಕ್ರಮ ನಡೆಸಿಕೊಟ್ಟರು.

ಅಥಣಿ ಗಚ್ಚಿನಮಠದ ಶ್ರೀ ಶಿವಬಸವ ಗುರು ಮುರುಘರಾಜೇಂದ್ರ ಸ್ವಾಮಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೇಹಾಲ್ ಭರತ್, ಆಧ್ಯ ನಟರಾಜ್, ಆರ್ಯನ್, ದಿವ್ಯ ಪ್ರಶಾಂತ್, ದ್ರೋಣ್ ಗೌರಿಶಂಕರ್ ಮುಂತಾದವರು ಶ್ರೀಗಳಿಂದ ಲಿಂಗಧಾರಣೆ ಮಾಡಿಸಿಕೊಂಡರು.

ಶ್ರೀಮತಿ ನಾಗರತ್ನಮ್ಮ ಮಲ್ಲಿಕಾರ್ಜುನಪ್ಪ, ಶ್ರೀಮತಿ ಶುಭ ನಟರಾಜ್, ಶ್ರೀಮತಿ ಶೋಭ ಪ್ರಶಾಂತ್ ದೇವರಾಜ್, ಶ್ರೀಮತಿ ಸುಷ್ಮ ಚಿದಾನಂದ್, ಶ್ರೀಮತಿ ಸವಿತಾ ವಿಷ್ಣು, ಶ್ರೀಮತಿ ಶ್ವೇತಾ ಅನಿಲ್, ಮಹಂತೇಶ್, ಶ್ರೀಮತಿ ರೇಣುಕಾ ಸ್ವಾಮಿ ಮೊದಲಾದವರು ಭಾಗವಹಿಸಿದ್ದರು.

## ಯುಬಿಡಿಟಿಯಲ್ಲಿ ಇಂದು ಚೈತ್ರ – 2022

ವಿಶ್ವವಿದ್ಯಾನಿಲಯ ಯುಬಿಡಿಟಿ ಇಂಜಿನಿಯರಿಂಗ್ (ಯುಬಿಡಿಟಿ) ಕಾಲೇಜ್‌ನಲ್ಲಿ ಇಂದು ಸಂಜೆ 5 ಕ್ಕೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದದಲ್ಲಿ ಚೈತ್ರ-2022 ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಲಾವಿದ, ಕನ್ನಡ ಚಲನಚಿತ್ರ ಮಂಡಳಿ ನಿರ್ದೇಶಕ ನಾಗೇಂದ್ರ ಶಾ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, ವನಿತಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಪದ್ಮಪ್ರಕಾಶ್ ಉಪಸ್ಥಿತರಿರುವರು. ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ ಎಸ್. ಹೊಳಿ ಅಧ್ಯಕ್ಷತೆ ವಹಿಸಲಿದ್ದಾರೆ.






## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ, ವಿಶೇಷ ಪೂಜೆ




ದಾವಣಗೆರೆ, ಜೂ. 27 - ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 29ರ ಬುಧವಾರ ಮಣ್ಣೆತ್ತಿನ ಅಮವಾಸ್ಯೆ ಪ್ರಯುಕ್ತ ವಿಶೇಷ ಪೂಜೆಗಳು ಜರುಗಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.





















**JANATHAVANI -** Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte